ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 5 । ಸಂಚಿಕೆ : 11 । ನವೆಂಬರ್ - 2023 । ಪುಟಗಳು : 20 । ಬೆಲೆ : 25/-

## ನವೆಂಬರ್ 1
## ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ಸಂಭ್ರಮ 50



## 70 ನೇ

# ಅಖಿಲ ಭಾರತ ಸಹಕಾರ ಸಪ್ತಾಹ – 2023

ಧ್ಯೇಯ : "5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು"

**14.11.2023 ರಿಂದ 20.11.2023**










ಅಭಿಮನ್ಯು
ಮೈಸೂರು ದಸರಾ ಆಚರಣೆ





# 70ನೇ ಅಖಿಲ ಭಾರತ ಸಹಕಾರ ಸಪ್ತಾಹ–2023

**ಈ ಬಾರಿಯ ಸಹಕಾರ ಸಪ್ತಾಹದ ಧ್ಯೇಯ**

**"Role of Cooperatives in $5 Trillion Economy and SDGs"**

**"5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು"**

| | |
|---|---|
| 14.11.2023<br>ಮಂಗಳವಾರ<br>Tuesday | **Recent Developments in Cooperatives.**<br>ಸಹಕಾರ ಸಂಘ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು. |
| | |
| 15.11.2023<br>ಬುಧವಾರ<br>Wednesday | **Revitalization of Non-Credit Cooperatives and Financial Inclusion.**<br>ಸಾಲೇತರ ಸಹಕಾರ ಸಂಘಗಳ ಪುನಃಶ್ಚೇತನ ಹಾಗೂ ಆರ್ಥಿಕ ಸೇರ್ಪಡೆ. |
| | |
| 16.11.2023<br>ಗುರುವಾರ<br>Thursday | **Adoption and Upgradation of Technology for Digitalization of Cooperatives.**<br>ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ. |
| | |
| 17.11.2023<br>ಶುಕ್ರವಾರ<br>Friday | **Emerging Areas and Ease-of-Doing Business for Cooperatives.**<br>ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರಿಯೆ ಮತ್ತು ಉದಯೋನ್ಮುಖ ವಲಯಗಳು. |
| | |
| 18.11.2023<br>ಶನಿವಾರ<br>Saturday | **Strengthening "Public–Private–Cooperative Partnership"**<br>ಸಾರ್ವಜನಿಕ – ಖಾಸಗಿ – ಸಹಕಾರಿ ಸಹಭಾಗಿತ್ವವನ್ನು ಬಲಪಡಿಸುವುದು. |
| | |
| 19.11.2023<br>ಭಾನುವಾರ<br>Sunday | **Cooperatives for Women, Youth, and Weaker Sections.**<br>ಮಹಿಳೆಯರು, ಯುವಜನ ಮತ್ತು ಅಬಲವರ್ಗಕ್ಕೆ ಸಹಕಾರ ಸಂಸ್ಥೆಗಳು. |
| | |
| 20.11.2023<br>ಸೋಮವಾರ<br>Monday | **Revamping of Cooperative Education and Training.**<br>ಸಹಕಾರ ಶಿಕ್ಷಣ, ತರಬೇತಿಯ ಪರಿಷ್ಕರಣೆ. |

## ಸಂಪಾದಕೀಯ

ಭಾರತದಲ್ಲಿ 8.5 ಲಕ್ಷಕ್ಕೂ ಅಧಿಕ ವಿವಿಧ ರೀತಿಯ ಸಹಕಾರ ಸಂಸ್ಥೆಗಳಿದ್ದು ಬಹುತೇಕ ಸಂಸ್ಥೆಗಳು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುವ ಮೂಲಕ ಭಾರತದ ಆರ್ಥಿಕತೆಗೆ ಉದಾರ ಕೊಡುಗೆ ನೀಡುತ್ತಾ ಬಂದಿವೆ. ಲಕ್ಷಾಂತರ ಉದ್ಯೋಗ ಸೃಷ್ಟಿಸಿರುವ ಸಹಕಾರ ಕ್ಷೇತ್ರ ರಾಷ್ಟ್ರದ 30 ಕೋಟಿಗೂ ಹೆಚ್ಚು ಸದಸ್ಯರಿಗೆ, ಗ್ರಾಹಕರಿಗೆ ವಿವಿಧ ರೀತಿಯ ಸೇವೆಗಳನ್ನು ಸಲ್ಲಿಸುತ್ತಿವೆ. ಆದರೂ ಸಹಕಾರ ಕ್ಷೇತ್ರ ಮತ್ತಷ್ಟು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಬೇಕಾಗಿದೆ. ಕಾಲಕಳೆದಂತೆ ಸಹಕಾರ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾಗುತ್ತಿವೆ, ತಂತ್ರಜ್ಞಾನ ಆಧಾಂತ ಡಿಜಿಟಲ್ ಸೇವೆಗಳು ಸೇರಿವೆ. ಪರಿಸ್ಥಿತಿಗೆ ತಕ್ಕಂತೆ ಸಹಕಾರ ಸಂಸ್ಥೆಗಳು ಬದಲಾಗಬೇಕಿವೆ.

# 70ನೇ ಅಖಿಲ ಭಾರತ ಸಹಕಾರ ಸಪ್ತಾಹ – ಪರಿಣಾಮಕಾರಿಯಾಗಿರಲಿ

ರಾಷ್ಟ್ರದ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳ ಮಾತೃ ಸಂಸ್ಥೆ "ಭಾರತೀಯ ರಾಷ್ಟ್ರೀಯ ಸಹಕಾರ ಯೂನಿಯನ್" ನವದೆಹಲಿ ಇವರ ಮಾರ್ಗದರ್ಶನದಲ್ಲಿ 2023ರ ನವಂಬರ್ 14ರಿಂದ ನವಂಬರ್ 20 ರವರೆಗೆ 70ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು "5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು" ಎಂಬ ಮುಖ್ಯ ಧ್ಯೇಯದೊಂದಿಗೆ ಆಚರಿಸಲಾಗುತ್ತಿದೆ.

ಭಾರತದಲ್ಲಿ 8.5 ಲಕ್ಷಕ್ಕೂ ಅಧಿಕ ವಿವಿಧ ರೀತಿಯ ಸಹಕಾರ ಸಂಸ್ಥೆಗಳಿದ್ದು ಬಹುತೇಕ ಸಂಸ್ಥೆಗಳು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುವ ಮೂಲಕ ಭಾರತದ ಆರ್ಥಿಕತೆಗೆ ಉದಾರ ಕೊಡುಗೆ ನೀಡುತ್ತಾ ಬಂದಿವೆ. ಲಕ್ಷಾಂತರ ಉದ್ಯೋಗ ಸೃಷ್ಟಿಸಿರುವ ಸಹಕಾರ ಕ್ಷೇತ್ರ ರಾಷ್ಟ್ರದ 30 ಕೋಟಿಗೂ ಹೆಚ್ಚು ಸದಸ್ಯರಿಗೆ, ಗ್ರಾಹಕರಿಗೆ ವಿವಿಧ ರೀತಿಯ ಸೇವೆಗಳನ್ನು ಸಲ್ಲಿಸುತ್ತಿವೆ. ಆದರೂ ಸಹಕಾರ ಕ್ಷೇತ್ರ ಮತ್ತಷ್ಟು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಬೇಕಾಗಿದೆ. ಕಾಲಕಳೆದಂತೆ ಸಹಕಾರ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾಗುತ್ತಿವೆ, ತಂತ್ರಜ್ಞಾನ ಆಧಾಂತ ಡಿಜಿಟಲ್ ಸೇವೆಗಳು ಸೇರಿವೆ. ಪರಿಸ್ಥಿತಿಗೆ ತಕ್ಕಂತೆ ಸಹಕಾರ ಸಂಸ್ಥೆಗಳು ಬದಲಾಗಬೇಕಿವೆ. ಸಹಕಾರ ಕ್ಷೇತ್ರವೂ ಹಲವು ಸಮಸ್ಯೆಗಳನ್ನು ಎದುರುಸುತ್ತಿದೆ, ಹಾಗೆಯೇ ಬಹುತೇಕ ಸಂಸ್ಥೆಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರದ ಸಾಧನೆ–ವೈಫಲ್ಯಗಳ ಚಿಂತನೆ ನಡೆಸಲು 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಅತ್ಯುತ್ತಮ ವೇದಿಕೆಯಾಗಿದೆ.

ಸಹಕಾರಿಗಳು ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಹಾಗೂ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸಲು ಸಾಧ್ಯವಾಗಲಿದೆ. ಸಹಕಾರಿ ಬಂಧುಗಳು ಸಹಸ್ರಾರು ಸಂಖ್ಯೆಯಲ್ಲಿ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಈ ಮೂಲಕ ಮನವಿ ಮಾಡುತ್ತದೆ.

ಸಹಕಾರ ಸಪ್ತಾಹ ಸಹಕಾರಿಗಳ ಪಾಲಿಗೆ ಹಬ್ಬವಿದ್ದಂತೆ, ಏಳು ದಿನಗಳ ಕಾಲ ಸಹಕಾರ ಸಂಸ್ಥೆಗಳ ಆವರಣದಲ್ಲಿ ಸಹಕಾರ ಧ್ವಜರೋಹಣ ನಡೆಸಿ, ದೀಪಾಲಂಕಾರಗೊಳಿಸಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಆಚರಿಸುವಂತೆ ಮನವಿ ಮಾಡುತ್ತದೆ.

"ಸಹಕಾರಿ ಬಂಧುಗಳಿಗೆ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಶುಭಾಷಯಗಳು."

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :

ಕಾರ್ಯನಿರ್ವಾಹಕ ಸಂಪಾದಕರು:

**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :

**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :

**ಪ್ರಜ್ವಲ್ ಕೆ.ಎನ್.**

ಮುಖ್ಯಕಾರ್ಯನಿರ್ವಹಣಾಧಿಕಾರಿ

# ಡಾ. ಶೇಖರಗೌಡ ಮಾಲಿ ಪಾಟೀಲರಿಗೆ “ಸಮನ್ವಯ ಸಿರಿ” ರಾಷ್ಟ್ರೀಯ ಪ್ರಶಸ್ತಿ



**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ಹಾಲಿ ನಿರ್ದೇಶಕರು, ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಡಾ.ಶೇಖರಗೌಡ ಮಾಲಿ ಪಾಟೀಲ್ ಅವರಿಗೆ ಸಮನ್ವಯ ಸಿರಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಶ್ರೀ 1008 ಶ್ರೀಶೈಲ ಜಗದ್ಗುರು ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಸಂಸ್ಮರಣೆಯಲ್ಲಿ ನೀಡಲಾಗುವ “ಸಮನ್ವಯ ಸಿರಿ ರಾಷ್ಟ್ರೀಯ ಪ್ರಶಸ್ತಿ–2021ರ ಪ್ರಶಸ್ತಿಯನ್ನು ಇತ್ತೀಚೆಗೆ ಶ್ರೀ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಪ್ರದಾನ ಮಾಡಿದರು.

ಪಾಟೀಲರು ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಗುಮಗೇರಾ ಗ್ರಾಮದವರು. ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಆ ಭಾಗದ ಜನರ ಅನಕ್ಷರತೆ ಕಳೆದು ಸುಜ್ಞಾನದ ಬೆಳಕು ಬಿತ್ತಿದ್ದಾರೆ. ಅವರು ವಿವಿಧ ಹಂತಗಳಲ್ಲಿ ಸಲ್ಲಿಸಿದ ಸಹಕಾರಿ ಕ್ಷೇತ್ರದ ಸೇವೆ ಅನುಪಮವಾದುದಾಗಿದೆ.

ಅವರು ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಲವಾರು ಉಪಯುಕ್ತ ಕೃತಿಗಳ ಪ್ರಕಟಣೆಗೆ ನೆರವಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ವಿದೇಶಗಳ ಅಧ್ಯಯನ ಪ್ರವಾಸದ ಕೃತಿಗಳೂ ಅವರಿಂದ ಹೊರಬಂದಿವೆ. ಶ್ರೀಯುತರ ಸಮಾಜ ಸೇವೆ, ಸಾಂಸ್ಕೃತಿಕ ಸೇವೆ, ಶೈಕ್ಷಣಿಕ ಸೇವೆ, ಸಾಹಿತ್ಯಕ ಸೇವೆಗಳ ಜತೆಗೆ ಸಹಕಾರಿ ಮನೋಭಾವ ಬೆಳೆಸಿಕೊಂಡು ಸೇವೆಯನ್ನೇ ಮೈಗೂಡಿಸಿಕೊಂಡಿದ್ದಾರೆ. ವಿವಿಧ ಕ್ಷೇತ್ರದ ಸಾಧನೆಯನ್ನು ಗುರುತಿಸಿ ಸಮಾಜೋಧಾರ್ಮಿಕ ಕಾರ್ಯಗಳು ಮುಂದುವರೆಯಲೆಂದು ಹಾರೈಸಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಸುಭಾಷಿತ :** ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ದೊರೆಯಲಿ ಎಂದಾಕ್ಷಣ ಬೇರೆಯವರಿಗೆ ಸ್ಥಾನವೇನಿಲ್ಲ ಎಂದಲ್ಲ.
ನಮ್ಮಲ್ಲಿಗೆ ಬೇರೆಯವರು ಬರಲಿ, ಅತಿಥಿಯಾಗಿ ಬರಲಿ, ಯಜಮಾನರಾಗಿ ಅಲ್ಲ. – ಕುವೆಂಪು

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು “ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು” ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ನಾಡದೇವಿ ಭುವನೇಶ್ವರಿ ಹೆಸರಿನಲ್ಲಿ ಬೃಹತ್ ಕನ್ನಡ ಭವನ ನಿರ್ಮಾಣ : ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

**ಬೆಂಗಳೂರು** : ಕರ್ನಾಟಕ ಸಂಭ್ರಮ 50ರ ಸವಿನೆನಪಿಗಾಗಿ ನಾಡದೇವಿ ಭುವನೇಶ್ವರಿ ಹೆಸರಿನಲ್ಲಿ ದೊಡ್ಡ ಕನ್ನಡ ಭವನವನ್ನು ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು. ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

1956ರ ನವೆಂಬರ್ 1 ರಂದು ಕನ್ನಡ ಭಾಷಿಕ ಪ್ರದೇಶಗಳು ಏಕೀಕರಣಗೊಂಡು ಮೈಸೂರು ರಾಜ್ಯ ಉದಯವಾಯಿತು. ನಂತರ 1973ರಲ್ಲಿ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರ ಅವಧಿಯಲ್ಲಿ ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ಮರು ನಾಮಕರಣ ಮಾಡಲಾಯಿತು ಎಂದರು.

**ಕನ್ನಡದ ಹಿರಿಮೆ ಬಿಂಬಿಸುವ ಕರ್ನಾಟಕ ಸಂಭ್ರಮ – 50 :** ಕರ್ನಾಟಕಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಸರ್ಕಾರ ಈ ಸಂಭ್ರಮಾಚರಣೆಯನ್ನು ಆಚರಿಸುವ ಸಲುವಾಗಿ ಇಡೀ ವರ್ಷ ಕನ್ನಡ ನೆಲ, ಜಲ ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬಿಂಬಿಸುವ 'ಕರ್ನಾಟಕ ಸಂಭ್ರಮ – 50' ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಿದೆ. 'ಹೆಸರಾಯಿತು ಕರ್ನಾಟಕ – ಉಸಿರಾಗಲಿ ಕನ್ನಡ' ಎಂಬ ಘೋಷ ವಾಕ್ಯದಡಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಮ್ಮ ಉಸಿರು ಕನ್ನಡವಾಗಬೇಕು. ಇಡೀ ರಾಜ್ಯದಲ್ಲಿ ಕನ್ನಡದ ವಾತಾವರಣ ನಿರ್ಮಾಣವಾಗಬೇಕು ಎಂದು ತಿಳಿಸಿದರು.

**ಅವಕಾಶ ವಂಚಿತರು ಮುಖ್ಯವಾಹಿನಿಗೆ ಬರಬೇಕು :** ವಚನಗಳು ಭಾರತಕ್ಕೆ ಮಾತ್ರವಲ್ಲ. ಇಡೀ ವಿಶ್ವಕ್ಕೆ ಅಗತ್ಯ. ಜಾತಿ ವ್ಯವಸ್ಥೆ ಕಾರಣಕ್ಕಾಗಿ, ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆ ನಿರ್ಮಾಣವಾಗಿದೆ. ಶತಮಾನಗಳಿಂದ ಶೂದ್ರರು ಹಾಗೂ



ಮಹಿಳೆಯರು ಶಿಕ್ಷಣ ಸಂಸ್ಕೃತಿಯಿಂದ ವಂಚಿತರಾಗಿದ್ದರು. ಸಮ ಸಮಾಜ ನಿರ್ಮಾಣವಾಗಬೇಕಾದರೆ ಅವಕಾಶವಂಚಿತರು, ದುರ್ಬಲರು ಮುಖ್ಯವಾಹಿನಿಗೆ ಬರಬೇಕು. ಅಂತಹ ಜನರನ್ನು ಗುರುತಿಸಿ, ಸಾಮಾಜಿಕ, ಆರ್ಥಿಕ ನ್ಯಾಯ ಕೊಡುವ ಬಗ್ಗೆ ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ ಎಂದರು.

**ವಚನ ಸಂಸ್ಕೃತಿ ಅಭಿಯಾನ :** ಅಸಮಾನತೆ ಇರುವ ಸಮಾಜದಲ್ಲಿ ಕೇವಲ ರಾಜಕೀಯ ಸ್ವಾತಂತ್ರ್ಯವಲ್ಲ. ಪ್ರತಿಯೊಬ್ಬರಿಗೂ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಸ್ವಾತಂತ್ರ್ಯ ಸಾರ್ಥಕವಾಗುತ್ತದೆ. ಇಂತಹ ವಿಶಯಗಳನ್ನೇ ಬಸವಣ್ಣನವರು, ಅಂಬೇಡ್ಕರ್ ರವರು ತಿಳಿಸಿದರು. ಶ್ರೀ ನಿಜಗುಣ ಸ್ವಾಮೀಜಿ ಅವರು ಹೇಳಿದಂತೆ ವಚನ ಸಂಸ್ಕೃತಿ ಅಭಿಯಾನ ಸರ್ಕಾರ ಹಮ್ಮಿಕೊಳ್ಳಲಿದೆ ಎಂದು ತಿಳಿಸಿದರು.

**ಶಕ್ತಿಯಿಲ್ಲದವರಿಗೆ ಶಕ್ತಿ ತುಂಬುವ ಯೋಜನೆಗಳು :** ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆಯಡಿ 86 ಕೋಟಿ ಮಹಿಳೆಯರು ಸರ್ಕಾರಿ ಬಸ್ ನಲ್ಲಿ ಉಚಿತ ಪ್ರಯಾಣ ಮಾಡಿದ್ದಾರೆ. ಶಕ್ತಿ ಇರುವವರಿಗೆ ಶಕ್ತಿ ಕೊಡುವುದಲ್ಲ. ಶಕ್ತಿ ಇಲ್ಲದವರಿಗೆ ಶಕ್ತಿ ತುಂಬ ಬೇಕೆನ್ನುವುದೇ ಪಂಚ ಗ್ಯಾರಂಟಿ ಯೋಜನೆಗಳ ಉದ್ದೇಶ ಎಂದರು.

**ಸಮಾಜಸೇವೆಯ ಮೂಲಕ ಋಣ ತೀರಿಸಲು ಸಾಧ್ಯ :** ಪ್ರೀತಿ, ವಿಶ್ವಾಸ, ಮನುಷ್ಯತ್ವ ಬಹಳ ಮುಖ್ಯ. ಮನುಷ್ಯತ್ವ ಇಲ್ಲದಿದ್ದರೆ ಅದು ಸಮಾಜವೇ ಅಲ್ಲ. ನಾವೆಲ್ಲರೂ ಕೂಡ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ಕೊಟ್ಟರೆ ಮಾತ್ರ ಬದುಕು ಸಾರ್ಥಕವಾಗುತ್ತದೆ. ನಾವು ಹುಟ್ಟಿದ ಮೇಲೆ ಸಮಾಜದಿಂದ ಎಲ್ಲವನ್ನೂ ಪಡೆದಿದ್ದೇವೆ ಎಂದ ಮೇಲೆ, ಸಮಾಜದ ಪರ ಕೆಲಸ ಮಾಡುವ ಮೂಲಕ ಸಮಾಜದ ಋಣ ತೀರಿಸಲು ಸಾಧ್ಯ. ಇಂತಹ ಕೆಲಸವೇ ಸಮಾಜ ಸೇವೆ ಎಂದರು.

**ಅರ್ಹತೆಯುಳ್ಳವರಿಗೆ ಪ್ರಶಸ್ತಿ :** ಕರ್ನಾಟಕ ಸಂಭ್ರಮದ ಶುಭಸಂದರ್ಭದಲ್ಲಿ ಪ್ರಶಸ್ತಿಗೆ ಭಾಜನರಾಗಿರುವ ಎಲ್ಲ 68 ಪ್ರಶಸ್ತಿ ಪುರಸ್ಕೃತರ ಸಾಧನೆ ಎಲ್ಲರಿಗೂ ಮಾದರಿಯಾಗಿದೆ. ಕರ್ನಾಟಕ ಎಂದು ನಾಮಕರಣಗೊಂಡು 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಈ ಬಾರಿ 10 ಸಂಘ–ಸಂಸ್ಥೆಗಳಿಗೆ ಈ ವಿಶೇಷವಾಗಿ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆ. ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ ಹೆಚ್ಚು ಅರ್ಹತೆ ಇದ್ದವರನ್ನು ಆಯ್ಕೆ ಮಾಡಬೇಕೆಂಬ ಸೂಚನೆಯನ್ನು ನೀಡಲಾಗಿತ್ತು. ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಒಂದು ಹೆಸರನ್ನು ಬಿಟ್ಟು ಬೇರೆ ಯಾರ ಹೆಸರನ್ನು ನಾನು ಸೂಚಿಸಿಲ್ಲ. ಬಹುತೇಕವಾಗಿ ಆಯ್ಕೆ ಸಮಿತಿ ಶಿಫಾರಸ್ಸು ಮಾಡಿದವರಿಗೆ ಪ್ರಶಸ್ತಿ ನೀಡಲಾಗಿದೆ ಎಂದು ತಿಳಿಸಿದರು. ವೇದಿಕೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕರಾದ ಆರ್.ವಿ. ದೇಶಪಾಂಡೆ, ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಅವರುಗಳು ಉಪಸ್ಥಿತರಿದ್ದರು.

# ಎಲ್ಲಾ ಸರ್ಕಾರಿ ಶಾಲೆಗಳಿಗೆ ಉಚಿತ ನೀರು ಮತ್ತು ವಿದ್ಯುತ್ : ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

**ಬೆಂಗಳೂರು :** ನವೆಂಬರ್ 1 ರಿಂದ ಎಲ್ಲಾ ಸರ್ಕಾರಿ ಶಾಲೆಗಳಿಗೆ ಉಚಿತ ನೀರು ಮತ್ತು ವಿದ್ಯುತ್ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಣೆ ಮಾಡಿದರು.

ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 68 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಕನ್ನಡಿಗರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿಶಾಲಿಗಳನ್ನಾಗಿ ಮಾಡುವ ಜತೆಗೆ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ, ಕನ್ನಡ ಶಾಲೆಗಳ ಮೂಲಭೂತ ಸವಲತ್ತುಗಳನ್ನು ಹೆಚ್ಚಿಸಲು ನಮ್ಮ ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ ಎಂದರು.

ದೇವರಾಜು ಅರಸು ಅವರು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟು 50 ವರ್ಷಗಳು ತುಂಬಿವೆ. ಈ ದಿನ ನಾವು ಒಂದು ಪ್ರತಿಜ್ಞೆ ಮಾಡೋಣ. ಕನ್ನಡದಲ್ಲೇ ವ್ಯವಹರಿಸುವ ಪ್ರತಿಜ್ಞೆಯನ್ನು ನಾವು ಮಾಡುವ ಮೂಲಕ ನಮ್ಮ ತಾಯ್ನೆಲದ ಋಣ ತೀರಿಸುವ ಕೆಲಸ ಮಾಡೋಣ. ಇಲ್ಲಿ ವಾಸ ಮಾಡುವ ಪ್ರತಿಯೊಬ್ಬರೂ ಕನ್ನಡದ ವಾತಾವರಣವನ್ನು ಸೃಷ್ಟಿಸಬೇಕು, ಸಂಭ್ರಮಿಸಬೇಕು ಎಂದು ಕರೆ ನೀಡಿದರು.

ಕನ್ನಡ ನೆಲದಲ್ಲಿದ್ದೂ ಕನ್ನಡ ಮಾತನಾಡದವರು ಹಲವು ಭಾಗಗಳಲ್ಲಿ ಇದ್ದಾರೆ. ನಮ್ಮ ಆಡಳಿತ ಭಾಷೆ ಕನ್ನಡ. ಆದ್ದರಿಂದ ನಾವು ಕನ್ನಡದಲ್ಲೇ ವ್ಯವಹರಿಸಬೇಕು. ಪ್ರತಿಯೊಬ್ಬರ, ಪ್ರತಿಯೊಂದು ಭಾಷೆಗೂ ನಾವು ಗೌರವ ಕೊಡಬೇಕು. ಆದರೆ ನಮ್ಮ ನಾಡಿನಲ್ಲಿ ವ್ಯವಹರಿಸುವಾಗ, ಆಡಳಿತದಲ್ಲಿ ಕನ್ನಡ ಬಳಕೆ ಆಗಬೇಕು. ಇದನ್ನು ಪ್ರತಿಯೊಬ್ಬ ಅಧಿಕಾರಿಯೂ ಚಾಚೂ ತಪ್ಪದೆ ಪಾಲಿಸಬೇಕು ಎಂದರು.

ಕೇಂದ್ರ ಸರ್ಕಾರ ಕರ್ನಾಟಕದಲ್ಲಿ ಇಂಗ್ಲಿಷ್, ಹಿಂದಿಯಲ್ಲಿ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದನ್ನು ಒಪ್ಪಲು ಸಾಧ್ಯವಿಲ್ಲ. ಕನ್ನಡದಲ್ಲೂ ಪ್ರವೇಶ ಪರೀಕ್ಷೆ ನಡೆಸಲು ಈ ಹಿಂದೆಯೂ ಒತ್ತಾಯಿಸಿದ್ದೆ. ಅಗತ್ಯಬಿದ್ದರೆ ಮತ್ತೆ ಕೇಂದ್ರಕ್ಕೆ ಪತ್ರ ಬರೆದು ಒತ್ತಾಯಿಸುತ್ತೇನೆ ಎಂದರು.

ಕನ್ನಡದಲ್ಲಿ ಕಲಿತರೆ ಉದ್ಯೋಗ ಸಿಗುವುದಿಲ್ಲ, ಜ್ಞಾನ ಸಂಪಾದನೆ ಸಾಧ್ಯವಿಲ್ಲ ಎನ್ನುವ ತಪ್ಪು ಕಲ್ಪನೆಯಿಂದ ಇಂಗ್ಲಿಷ್ ಕಾನ್ವೆಂಟ್ ವ್ಯಾಮೋಹ ಬೆಳೆಸಿಕೊಂಡಿದ್ದಾರೆ. ಇದು ಸರಿಯಲ್ಲ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಕನ್ನಡ ಮಾಧ್ಯಮದಲ್ಲಿ ಕಲಿತವರು ಉನ್ನತ ಹುದ್ದೆಗಳಲ್ಲಿ ಇದ್ದಾರೆ. ಉನ್ನತ ಮಟ್ಟದ ಸಾಧನೆ ಮಾಡಿದ್ದಾರೆ ಎಂದು ಉದಾಹರಿಸಿದರು.

ಗುಣಮಟ್ಟದ ಶಿಕ್ಷಣ ಮತ್ತು ಉತ್ತಮ ಕಲಿಕಾ ವಾತಾವರಣ ಹಾಗೂ ಶಾಲೆಗಳ ಗುಣಮಟ್ಟ ಹೆಚ್ಚಿಸುವುದು, ಅಗತ್ಯ ಎಲ್ಲಾ ಸವಲತ್ತುಗಳನ್ನು ಒದಗಿಸುವುದು ನಮ್ಮ ಸರ್ಕಾರದ ಆದ್ಯತೆ ಎಂದರು.

ತಮ್ಮ ಮಕ್ಕಳನ್ನು ಅವರ ಇಷ್ಟದ ಭಾಷೆಯಲ್ಲಿ ಕಲಿಸುವುದು ಪೋಷಕರ ನಿರ್ಧಾರಕ್ಕೆ ಬಿಟ್ಟ ವಿಷಯ ಎಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಮಾತೃಭಾಷೆಯ ಮಾಧ್ಯಮದಲ್ಲೇ ಕಲಿಯುವುದು ಅತ್ಯಂತ ವೈಜ್ಞಾನಿಕ ಎನ್ನುವುದನ್ನು ಗ್ರಹಿಸಬೇಕು ಎಂದರು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರಾಥಮಿಕ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ, ಶಾಸಕ ರಿಜ್ವಾನ್ ಹರ್ಷದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

# ನಾಡ ಹಬ್ಬ ಮೈಸೂರು ದಸರಾ

## ಕನ್ನಡ ಶೃತಿಯಾಗಲಿ, ಅಭಿವೃದ್ಧಿ ಕೃತಿಯಾಗಲಿ - ಹಂಸಲೇಖ



**ಮೈಸೂರು** : ನಾಡನ್ನು ಆವರಿಸಿದ ಬರಗಾಲ ಮತ್ತು ಕಾವೇರಿ ಹೋರಾಟದ ನಡುವೆಯೇ, ನಗರದ ಚಾಮುಂಡಿ ಬೆಟ್ಟದಲ್ಲಿ ಉದ್ಘಾಟನೆಗೊಂಡ ಸಂಭ್ರಮದ ದಸರಾ ಉತ್ಸವಕ್ಕೆ, ಕನ್ನಡ ಮತ್ತು ಕರ್ನಾಟಕದ ಅಭಿವೃದ್ಧಿಯ ಆಶಯ ಮುನ್ನುಡಿ ಬರೆಯಿತು.

'ಬರಗಾಲ ಕಳೆದು ಹಿಂಗಾರು ಮಳೆ ಚೆನ್ನಾಗಿ ಆಗಲಿ, ರೈತರಿಗೆ ಉತ್ತಮ ಬೆಳೆ ಸಿಕ್ಕಲಿ' ಎಂಬ ಪ್ರಾರ್ಥನೆಯೂ ಮೂಡಿಬಂತು. ಹತ್ತು ದಿನಗಳ ವೈವಿಧ್ಯಮಯ ಕಾರ್ಯಕ್ರಮಗಳಿಗೆ ಹೀಗೆ ಶುಭಾರಂಭವೂ ದೊರಕಿತು.

ಉತ್ಸವಕ್ಕೆ ಚಾಲನೆ ನೀಡಿದ ಸಂಗೀತ ನಿರ್ದೇಶಕ ಹಂಸಲೇಖ, 'ಕನ್ನಡ, ಕರ್ನಾಟಕದ ಅಭಿವೃದ್ಧಿಗೆ ದಸರಾ ಮುನ್ನುಡಿ ಬರೆಯಲಿ. ಕನ್ನಡ ಶೃತಿಯಾಗಲಿ, ಅಭಿವೃದ್ಧಿ ಕೃತಿಯಾಗಲಿ' ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಬೆಳ್ಳಿರಥದಲ್ಲಿ ಪ್ರತಿಷ್ಠಾಪಿಸಿದ ಚಾಮುಂಡೇಶ್ವರಿ ಪುತ್ಥಳಿಗೆ ಗಣ್ಯರೊಂದಿಗೆ ಹಂಸಲೇಖ ಅವರು ಪುಷ್ಪಾರ್ಚನೆ ಮಾಡುತ್ತಿದ್ದಂತೆ ನೆರೆದ ಸಭಿಕರು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. 'ಕರ್ನಾಟಕವೆಂದು ಹೆಸರಾಗಿ ಐದಶ (ಐದು ದಶಕ), ನನ್ನ ಕಲಾ ಕಾಯಕಕ್ಕೂ ಐದಶ. ಸಾಮಾನ್ಯ ವ್ಯಕ್ತಿಯಾಗಿ ನಾನು ಕನ್ನಡ ದೀಪವನ್ನು ಹಚ್ಚಿದ್ದರೂ, ನನ್ನ ಕೈಯಲ್ಲಿದ್ದ ಚೈತನ್ಯ ಈ ನಾಡಿನದ್ದು, ಎಲ್ಲ ಹಿರಿಯರದ್ದು' ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

### ಕನ್ನಡ ದೀಪ, ಶೃತಿ, ಅಭಿವೃದ್ಧಿ, ಶಾಂತಿ, ಸಮೃದ್ಧಿ...

'ಕನ್ನಡ ದೀಪ, ಶೃತಿ, ಅಭಿವೃದ್ಧಿ, ಶಾಂತಿ, ಸಮೃದ್ಧಿ–ಇದು ಇವತ್ತಿನ ಉದ್ಘಾಟನೆಯ ಮುನ್ನುಡಿ. ಕನ್ನಡ ಶೃತಿಯಾಗಬೇಕು.ಅಭಿವೃದ್ಧಿ ಕೃತಿಯಾಗಬೇಕು. ನಮ್ಮ ಕಾವೇರಿಗೆ ನಿಧಿ ಇದೆ. ಕಾರುಣ್ಯಕ್ಕೆ ಎಲ್ಲಿ ನಿಧಿ ಇದೆ? ಕನ್ನಡಕ್ಕೆ ಮಿತಿ ಇದೆ. ಅದರ ಭಾವಕ್ಕೆ ಎಲ್ಲಿ ಮಿತಿ ಇದೆ? ಕನ್ನಡವನ್ನು ಪ್ರಪಂಚದ ವೇದಿಕೆಯಲ್ಲಿ ಪ್ರತಿಷ್ಠಾಪಿಸಬೇಕು. ಆಗ ಮಾತ್ರ ನಮ್ಮ ರಾಷ್ಟ್ರ ಮತ್ತು ಕನ್ನಡ ಒಟ್ಟಿಗೇ ಮೆರೆಯಲು ಸಾಧ್ಯ' ಎಂದು ಹಂಸಲೇಖ ಪ್ರತಿಪಾದಿಸಿದರು. ದಸರಾ ಉತ್ಸವವನ್ನು ಉದ್ಘಾಟಿಸಿದ ಸಂಗೀತ ನಿರ್ದೇಶಕ ಹಂಸಲೇಖ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಶಾಸಕರಾದ ಜಿ.ಟಿ. ದೇವೇಗೌಡ, ದರ್ಶನ್ ಧ್ರುವನಾರಾಯಣ, ಜಿ.ಡಿ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಶಿವರಾಜ ತಂಗಡಗಿ, ಮೇಯರ್ ಶಿವಕುಮಾರ್ ಮತ್ತು ಶಾಸಕ ತನ್ವೀರ್ ಸೇಠ್ ಸೇರಿದಂತೆ ಜನಪ್ರತಿನಿಧಿಗಳು ಉಪಸ್ಥಿತರಿದ್ದರು. 'ಶಾಂತಿ ಮಂತ್ರ, ಕನ್ನಡದ ಅಭಿವೃದ್ಧಿ, ಶಾಂತಿ ಸಮೃದ್ಧಿಯೇ ಕನ್ನಡಿಗರಿಗೆ ಒಂದಂಶದ ಕಾರ್ಯಕ್ರಮವಾಗಬೇಕು. ಕರ್ನಾಟಕದಲ್ಲಿ ವಾಸವಿದ್ದು ಕನ್ನಡ ಬಾರದವರ ಕುರಿತ ಸಮೀಕ್ಷೆ ನಡೆಯಬೇಕು. ಅವರಿಗೆ ಕನ್ನಡ ಕಲಿಸಿ ಕನ್ನಡದ ಪಟ್ಟ ಕೊಡಬೇಕು. ಆ ಪಟ್ಟ ತೋರಿಸಿದರೆ, ಬಿಪಿಎಲ್, ಎಪಿಎಲ್ ಕಾರ್ಡ್ ಇಲ್ಲದಿದ್ದರೂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗುವಂತಿರಬೇಕು' ಎಂದು ಪ್ರತಿಪಾದಿಸಿದರು.



'ಪ್ರತಿಭೆ, ಉದ್ಯಮ ಮತ್ತು ಅಗತ್ಯಗಳನ್ನು ಆಧರಿಸಿ ಜಿಲ್ಲೆಗಳನ್ನು ಜೋಡಿಸಬೇಕು. ಹುಬ್ಬಳ್ಳಿ–ಬೆಳಗಾವಿ, ಮೈಸೂರು–ಮಂಗಳೂರು ಹೀಗೆ ರಾಜ್ಯದ ಎಲ್ಲ ಜಿಲ್ಲೆಗಳನ್ನೂ ಜೋಡಿಸಿ ಪ್ರತಿಭೆ–ವ್ಯವಹಾರವನ್ನು ಒಂದುಗೂಡಿಸಬೇಕು. ಕನ್ನಡದ ಭಾಷಿಕ ಅಗತ್ಯಗಳನ್ನು ಪೂರೈಸಬೇಕು' ಎಂದರು.

'ಕೃಷಿಕ– ಕಾರ್ಪೊರೇಟ್ ಕನ್ನಡಿಗರ ಜೋಡಿಯಾಗಬೇಕು. ಇಬ್ಬರಿಗೂ ಪರಸ್ಪರರ ಸ್ಥಿತಿ–ಗತಿಯ ಕುರಿತು ಅರಿವಾಗಬೇಕು. ಜೋಡಿ ಕಲ್ಯಾಣವಾಗಬೇಕು. ಕನ್ನಡ ಸಂಘಟನೆಗಳು, ಕನ್ನಡಾಭಿಮಾನಿಗಳು ಕನ್ನಡದ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಇದನ್ನು ನಾವೇ ಮುಂದಿನ ದಿನದಿಂದ ಆರಂಭಿಸುತ್ತೇವೆ' ಎಂದರು.

'ಪ್ರತಿ ತಾಯಿಯೂ ಮಕ್ಕಳಿಗೆ ಕನ್ನಡ ಪದ, ಜನಪದ, ಸಿನಿಮಾಪದ ಕಲಿಸಬೇಕು. ಕನ್ನಡ ಸಮಾಜದಲ್ಲಿ ತಲೆ ಎತ್ತಿ ಬದುಕಲು ಅದೇ ನೈತಿಕ ಅರ್ಹತೆಯಾಗಬೇಕು. ಕನ್ನಡವನ್ನು ಶಾಂತಿ ಸಮೃದ್ಧಿಯಾಗಿ ಬೆಳೆಸಬೇಕು. ಮನುಜಮತ ವಿಶ್ವ ಪಥ ಮಾತಿನ ಮೂಲಕ ಕುವೆಂಪು ಕನ್ನಡವನ್ನು ಜಾಗತಿಕ ಮಟ್ಟಕ್ಕೆ ಏರಿಸಿದ್ದಾರೆ' ಎಂದರು.

## ಬರ : ರೂ. 4,500 ಕೋಟಿ ನೆರವಿನ ನಿರೀಕ್ಷೆ

'ಈ ಬಾರಿ ರಾಜ್ಯವನ್ನು ಹಸಿರು ಬರ ಆವರಿಸಿದೆ. 42 ಲಕ್ಷ ಹೆಕ್ಟೇರ್‌ನಲ್ಲಿ ಸುಮಾರು ರೂ. 30 ಸಾವಿರ ಕೋಟಿಯಷ್ಟು ಬೆಳೆ ಹಾನಿಯಾಗಿದೆ. ಬರ ವೀಕ್ಷಿಸಿರುವ ಕೇಂದ್ರದಿಂದ ರೂ. 4,500 ಕೋಟಿ ನೆರವು ದೊರಕುವ ನಿರೀಕ್ಷೆ ಇದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಕೇಂದ್ರವೊಂದೇ ಎಲ್ಲ ಪರಿಹಾರವನ್ನು ನೀಡಲು ಆಗುವುದಿಲ್ಲ. ನೀರು, ಉದ್ಯೋಗ, ಮೇವನ್ನು ರಾಜ್ಯ ಸರ್ಕಾರ ಪೂರೈಸುತ್ತದೆ' ಎಂದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಸರ್ಕಾರದ ಅಭಿವೃದ್ಧಿಯ ಮಂತ್ರವನ್ನು ಜಪಿಸಿದರು.

'ಬರಗಾಲವಿದ್ದರೂ ಈ ಬಾರಿ ದಸರ ನಿಲ್ಲಿಸಬಾರದು. ಆದರೆ ಸಾಂಪ್ರದಾಯಿಕವಾಗಿ ಮಾಡಲೇಬೇಕು. ಮಹತ್ವವೂ ಕಡಿಮೆಯಾಗಬಾರದು ಎಂಬ ಆಶಯದಲ್ಲಿ ಉತ್ಸವವನ್ನು ಸರ್ಕಾರ ಹಮ್ಮಿಕೊಂಡಿದೆ' ಎಂದು ಪ್ರತಿಪಾದಿಸಿದರು.


## ಸಂವಿಧಾನ ಪೀಠಿಕೆ ಗಾಯನ

ದಸರಾ ಉದ್ಘಾಟನೆ ಕಾರ್ಯಕ್ರಮದ ಹೊಸ ಸೇರ್ಪಡೆಯಾಗಿ, ಸಂವಿಧಾನ ಪೀಠಿಕೆಯ ಗಾಯನವೂ ವಿಶೇಷ ಗಮನ ಸೆಳೆಯಿತು. ಉತ್ಸವವನ್ನು ಉದ್ಘಾಟಿಸಿದ ಹಂಸಲೇಖ ಅವರ ಸಂಗೀತ ನಿರ್ದೇಶನದಲ್ಲೇ ಈ ಗಾಯನ ಮೂಡಿಬಂದಿದ್ದು ಇನ್ನೊಂದು ವಿಶೇಷವಾಗಿತ್ತು. ಗಾಯನ ನಡೆಯುತ್ತಿದ್ದಾಗ, ಹಂಸಲೇಖ ದನಿಗೂಡಿಸಿ, ಭಾವಾಭಿನಯ ಮಾಡಿದರು. 'ಸಂವಿಧಾನವೇ ಇಲ್ಲದ ಸಮಯದಲ್ಲಿ ಮೀಸಲಾತಿ ಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರ್ ಸದಾ ಸ್ಮರಣೀಯ' ಎಂದು ಸಚಿವ ಡಾ.ಮಹದೇವಪ್ಪ ಸ್ಮರಿಸಿದರು.

ಹಂಸಲೇಖ ಪತ್ನಿ ಲತಾ, ಸಂಸದ ಪ್ರತಾಪಸಿಂಹ, ಸಚಿವರಾದ ಕೆ.ವೆಂಕಟೇಶ್, ಕೆ.ಜೆ.ಜಾರ್ಜ್, ಶಿವರಾಜ ತಂಗಡಗಿ, ಕೆ.ಎಚ್.ಮುನಿಯಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಎ.ಆರ್.ಕೃಷ್ಣಮೂರ್ತಿ, ಜಿ.ಡಿ.ಹರೀಶ್ ಗೌಡ, ತನ್ವೀರ್ ಸೇಠ್, ದರ್ಶನ್ ಧ್ರುವನಾರಾಯಣ, ಅನಿಲ್ ಚಿಕ್ಕಮಾದು, ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ಮರಿತಿಬ್ಬೇಗೌಡ, ಡಾ.ಟಿ.ತಿಮ್ಮಯ್ಯ, ಡಿ.ರವಿಶಂಕರ್, ಸಿ.ಎನ್.ಮಂಜೇಗೌಡ, ಕನ್ನಡ ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯತ್ ಸಿಇಒ ಕೆ.ಎಂ.ಗಾಯತ್ರಿ, ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಎಸ್ಪಿ ಸೀಮಾ ಲಾಟ್ಕರ್, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೊತ್ ಉಪಸ್ಥಿತರಿದ್ದರು.

## ರಾಷ್ಟ್ರೀಯ ಸಹಕಾರ ಯೂನಿಯನ್ ವಾರ್ಷಿಕ ಮಹಾಸಭೆ

# ಶಿಕ್ಷಣ ನಿಧಿ ಬಳಕೆ ಸಹಕಾರಿಗಳ ಕೈಯಲ್ಲಿರಲಿ : ದಿಲೀಪ್ ಸಂಘಾನಿ




**ದೆಹಲಿ :** ಹೊಸ ಸಹಕಾರ ಸಚಿವಾಲಯದ ಮೂಲಕ, ಸಹಕಾರಿ ಚಳವಳಿಯ ಸಮಸ್ಯೆಗಳನ್ನು ಯಶಸ್ವಿಯಾಗಿ ನಿಭಾಯಿಸಲಾಗುತ್ತಿದೆ ಮತ್ತು ಸಹಕಾರಿಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಎನ್‌ಸಿಯುಐನ ಅಧ್ಯಕ್ಷರಾದ ದಿಲೀಪ್ ಸಂಘಾನಿ ಹೇಳಿದರು.

ಎನ್‌ಸಿಯುಐ ವಾರ್ಷಿಕ ಮಹಾಸಭೆಯ ಉದ್ದೇಶಿಸಿ ಮಾತನಾಡಿದ ಅವರು, ಜನರು ಸಹಕಾರಿ ಸಂಸ್ಥೆಗಳಲ್ಲಿ ಬಂಡವಾಳವನ್ನು ಹೂಡುತ್ತಾರೆ ಮತ್ತು ಈ ಸಂಸ್ಥೆಗಳನ್ನು ಬೆಂಬಲಿಸುವ ಮೂಲಕ ಸರ್ಕಾರವು ಪಾಲುದಾರನ ಪಾತ್ರವನ್ನು ವಹಿಸುತ್ತದೆ ಎಂದು ನಮಗೆಲ್ಲರಿಗೂ ತಿಳಿದಿದೆ. ಈ ಸಂಸ್ಥೆಗಳ ಕೆಲಸದಲ್ಲಿ ಸರ್ಕಾರದ ಹಸ್ತಕ್ಷೇಪ ಉಂಟಾದಾಗ, ಈ ಸಂಸ್ಥೆಗಳ ಸ್ವರೂಪದ ಮೇಲೆ ಪರಿಣಾಮ ಬೀರುತ್ತದೆ" ಎಂದು ಹೇಳಿದರು.

1984ರಲ್ಲಿ ಬಹು-ರಾಜ್ಯ ಸಹಕಾರಿ ಸಂಘಗಳ ತಿದ್ದುಪಡಿ ಮಸೂದೆ ಅಂಗೀಕಾರವಾದಾಗಿನಿಂದ ಎನ್‌ಸಿಯುಐ ಈ ನಿಧಿಯ ಪಾಲಕನಾಗಿ ಕಾರ್ಯನಿರ್ವಹಿಸಿದೆ ಮತ್ತು ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಎನ್‌ಸಿಯುಐ ಅಧ್ಯಕ್ಷರ ನೇತೃತ್ವದ ಸಮಿತಿಯು ಅನುಮೋದಿಸಿದ ಮೊತ್ತವನ್ನು ಖರ್ಚು ಮಾಡಲಾಗಿದೆ ಎಂದು ಇತಿಹಾಸವನ್ನು ಮೆಲುಕು ಹಾಕಿದರು. ಶಿಕ್ಷಣ ಮತ್ತು ತರಬೇತಿ ಚಟುವಟಿಕೆಗಳ ಬಗ್ಗೆ ತಿಳಿಸಿದರು.

"ಆದಾಗ್ಯೂ, ಬಹು-ರಾಜ್ಯ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ, 2022ರ ನಿಯಮಗಳ ಪ್ರಕಾರ, ಸಮಿತಿಯ ಎಲ್ಲಾ 9 ಸದಸ್ಯರು ಸರ್ಕಾರಿ ಅಧಿಕಾರಿಗಳು ಸಹಕಾರಿ ಶಿಕ್ಷಣ ನಿಧಿಯು, ಸಹಕಾರಿ ಸಂಸ್ಥೆಗಳಿಂದ ಸಂಗ್ರಹಿಸಿದ ಹಣವಾಗಿರುವುದರಿಂದ ಅದರ ನಿರ್ವಹಣೆಯು ಸಹಕಾರಿ ನಾಯಕತ್ವದ ಕೈಯಲ್ಲಿರಬೇಕು" ಎಂದರು.

2022-23ರ ಅವಧಿಯಲ್ಲಿ 107 ಕಾರ್ಯಕ್ರಮಗಳ ಗುರಿಯನ್ನು ಮೀರಿದ ಸಾಧನೆಗಳೊಂದಿಗೆ ಸಹಕಾರಿ ಅಭಿವೃದ್ಧಿಯಲ್ಲಿ 12 ವಾರಗಳ ಡಿಪ್ಲೊಮಾ ಕಾರ್ಯಕ್ರಮಗಳನ್ನು ಒಳಗೊಂಡಂತೆ 203 ತರಬೇತಿ ಕಾರ್ಯಕ್ರಮಗಳನ್ನು ನವದೆಹಲಿಯ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ (NCCE) ಆಯೋಜಿಸಿದೆ ಎಂದು ಅವರು ಹೇಳಿದರು.

"2022-23 ವರ್ಷದಲ್ಲಿ, ಎನ್‌ಸಿಯುಐ ಸಹಕಾರ ಶಿಕ್ಷಣ ಕ್ಷೇತ್ರ ಯೋಜನೆಗಳು 71 ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಿದ್ದು, 2,398 ಜನರು ಭಾಗವಹಿಸಿದ್ದರು. ಸಕ್ರಿಯ ಸದಸ್ಯತ್ವ ಅಭಿಯಾನದಲ್ಲಿ, ವರ್ಷದಲ್ಲಿ 6,898 ಹೊಸ ಸದಸ್ಯರನ್ನು ನೋಂದಾಯಿಸಲಾಗಿದೆ. ಒಟ್ಟು 144 ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. 103 ಹೊಸ ಸ್ವಸಹಾಯ ಸಂಘಗಳನ್ನು ರಚಿಸಿದರೆ, ವರ್ಷದಲ್ಲಿ 26 ಹೊಸ ಸಹಕಾರಿಗಳನ್ನು ನೋಂದಾಯಿಸಲಾಗಿದೆ" ಎಂದರು. ಎನ್‌ಸಿಯುಐ ಉಪಾಧ್ಯಕ್ಷ ಡಾ. ಬಿ. ಜೇಂದರ್ ಸಿಂಗ್ ವಂದನಾರ್ಪಣೆ ಮಾಡಿದರು.

## ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ

# 47ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ




**ನವದೆಹಲಿ :** ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 47ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ಇತ್ತೀಚೆಗೆ ನವದೆಹಲಿಯ, ಎನ್‌ಸಿಯುಐ ಸಭಾಂಗಣದಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಜ್ಯೋತೀಂದ್ರ ಮೆಹ್ತಾರವರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಸಭೆಯಲ್ಲಿ ನ್ಯಾಫಕಬ್ ಅಧ್ಯಕ್ಷರಾದ ಜ್ಯೋತೀಂದ್ರ ಮೆಹ್ತಾರವರು ಹಾಗೂ ನ್ಯಾಫಕಬ್ ಪ್ರೆಸಿಡೆಂಟ್ ಎಮಿರೆಟಸ್ ರವರಾದ ಡಾ॥ ಎಚ್.ಕೆ. ಪಾಟೀಲರು ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಯ ಕುರಿತು ಮಾತನಾಡಿದರು.

ಈ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ನ್ಯಾಫಕಬ್‌ನ ಉಪಾಧ್ಯಕ್ಷರಾದ ವಿದ್ಯಾಧರ ವಿ. ಅನಸ್ಕರ್, ನಿರ್ದೇಶಕರುಗಳಾದ ದಿಲೀಪ ಸಂಘಾನಿ, ಆರ್.ಬಿ. ಶಾಂಡಿಲ್ಯ, ಎ.ಎಂ. ಹಿಂಡಸಗೇರಿ, ಮುದಿತ್ ವರ್ಮಾ, ಕೆ. ಜಯವರ್ಮಾ, ಲಕ್ಷ್ಮೀದಾಸ್, ವೇಮಿರೆಡ್ಡಿ ನರಸಿಂಹ ರೆಡ್ಡಿ, ಎಸ್.ಎನ್. ಬೆಂಡೆ, ಡಿ.ಎ. ಚಳಕೆ, ಜಿ.ಯು. ವ್ಯಾಸ್, ಜಿ.ಸಿ. ಆಚಾರಜಿ, ಅಲಕಾ ಶ್ರೀವಾಸ್ತವ, ಕೆ.ಎಲ್. ಪಟೇಲ್, ಡಾ॥ ಯು.ವಿ. ಜೋಶಿ, ಎನ್.ವಿ. ಪಟೇಲ್, ಓ.ಪಿ. ಶರ್ಮಾ, ಜಿ.ಇ. ಠಾಕೂರ್, ಪ್ರೊ॥ ಜ್ಯೋತಿರ್‌ಮಯ ಕರ್, ಎಸ್.ಎಸ್. ಸಿಸೋಡಿಯ, ರಮೇಶ ಮಂತ್ರಿ, ಎನ್.ಎಸ್. ಜಯಕುಮಾರ್, ಮುಖ್ಯಕಾರ್ಯನಿರ್ವಹಣಾಧಿಕಾರಿ ಯೋಗೇಶ್ ಶರ್ಮಾ ಉಪಸ್ಥಿತರಿದ್ದರು. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಮತ್ತಿತರರು ಉಪಸ್ಥಿತರಿದ್ದರು.



# ಹೆಸರಾಯಿತು ಕರ್ನಾಟಕ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ
# ಉಸಿರಾಯಿತು ಕನ್ನಡ, ಸವಿನುಡಿ ಕನ್ನಡ, ಸಿರಿಸಿರಿ ಕನ್ನಡ



**ಡಾ. ಶೇಖರಗೌಡ ಮಾಲಿಪಾಟೀಲ್**
ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು,
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ
ಮಾಜಿ ಅಧ್ಯಕ್ಷರು, ಕೊಪ್ಪಳ
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

**1956, ನವೆಂಬರ್ 1 ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬಹುದಾದ ದಿನ. ಪೂಜ್ಯ ಮಹಾತ್ಮ ಗಾಂಧೀಜಿ ಅವರ ಬಹು ವರ್ಷಗಳ ಕನಸು ನನಸಾದ ದಿನ. 200 ವರ್ಷಗಳ ಸ್ವಾತಂತ್ರ್ಯ ಹೋರಾಟದ ನಂತರ ಗಳಿಸಿದ ಸ್ವತಂತ್ರ ಭಾರತ ಬಹುರಾಜ್ಯಗಳ ಆಡಳಿತಕ್ಕೆ ಒಳಪಟ್ಟಿತ್ತು. ಅನ್ಯರ ಆಡಳಿತ ಮಾನಸಿಕ ವಿಪ್ಲವವನ್ನು ಉಂಟು ಮಾಡಿದ್ದಿತು. ರಾಷ್ಟ್ರದ ಬಗ್ಗೆ ಅಪಾರ ಚಿಂತನೆಯನ್ನು ಹೊಂದಿದ್ದ ಗಾಂಧೀಜಿ ಭವ್ಯ ಭಾರತದ ಕನಸು ನನಸಾಗಬೇಕಾದರೆ ಜನರಾಡುವ ಭಾಷೆಯ ಆಧಾರದ ಮೇಲೆ ರಾಜ್ಯಗಳ ವಿಂಗಡನೆಯಾಗಬೇಕೆಂದು ಬಯಸಿದ್ದರು. ಆಳರಸರ ಆಡಳಿತದಡಿ ಹತ್ತಾರು, ನೂರಾರು ಭಾಷೆಗಳನ್ನು ಮಾತನಾಡುತ್ತಿದ್ದ ಜನ ವಿವಿಧ ರಾಜ್ಯಗಳ ಆಡಳಿತದಲ್ಲಿ ಹಂಚಿಹೋಗಿದ್ದರು. ಒಂದೇ ಭಾಷೆಯನ್ನು ಆಡುವ ಜನರೆಲ್ಲರೂ ಒಂದೇ ಆಡಳಿತದಡಿ ಬರಬೇಕೆಂದು ಗಾಂಧೀಜಿ ಬಯಸಿದ್ದರು.**

ಆಂಧ್ರಪ್ರದೇಶದ ರಾಜಕೀಯ ಧುರೀಣ ಪೊಟ್ಟಿ ಶ್ರೀರಾಮುಲು ಅವರು ಭಾಷಾವಾರು ಪ್ರಾಂತ್ಯಗಳ ರಚನೆಯಾಗಬೇಕೆಂದು ಸತ್ಯಾಗ್ರಹ ಆರಂಭಿಸಿ, ಸತ್ಯಾಗ್ರಹ ಸಂದರ್ಭದಲ್ಲೇ ದೇಹ ತ್ಯಾಗ ಮಾಡಿದರು. ತಕ್ಷಣವೇ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು ಭಾಷಾ ಆಧರಿತ ರಾಜ್ಯಗಳ ಪುನರ್ವಿಂಗಡಣೆ ಕೈಗೊಂಡಿತು.

ಆ ವೇಳೆಗಾಗಲೇ ಹಲವು ದಶಕಗಳಿಂದ ಕರ್ನಾಟಕದಲ್ಲಿ ಕನ್ನಡ ಮಾತನಾಡುವವರೆಲ್ಲರೂ ಒಂದೇ ಆಡಳಿತದಡಿ ಬರಬೇಕು, ಕನ್ನಡವೇ ಸಾರ್ವಭೌಮ ಭಾಷೆಯಾಗಬೇಕು, ರಾಜ್ಯದ ಹೆಸರು ಕರ್ನಾಟಕ ಎಂದಾಗಬೇಕು ಎಂಬ ಅವಿರತ ಪ್ರಯತ್ನಗಳು ನಡೆದಿದ್ದವು.

**ಪಂಪ – ಪುಟ್ಟಪ್ಪ :** ಪಂಪನಿಂದ ಪುಟ್ಟಪ್ಪನವರೆಗೆ, ನಾಗಚಂದ್ರನಿಂದ ಬೇಂದ್ರೆಯವರೆಗೆ ಕನ್ನಡ ಭಾಷಾ ಶ್ರೀಮಂತಿಕೆಯನ್ನು ವಿಜೃಂಭಿಸುವ ಪ್ರಯತ್ನಗಳು ನಡೆದವು.

ಕನ್ನಡನಾಡು ಉದಯವಾಗಬೇಕೆಂದು ಕನ್ನಡ ಕುಲಪುರೋಹಿತ ಆಲೂರು ವೆಂಕಟರಾವ್ ಅವರ ನೇತೃತ್ವದಲ್ಲಿ ತೀವ್ರ ಹೋರಾಟ ಆರಂಭಗೊಂಡಿತು. ಆ ವೇಳೆಗಾಗಲೇ ಡಿ.ವಿ.ಜಿ., ಪು.ತಿ.ನ., ಕುವೆಂಪು, ಬೆಂದ್ರೆ, ಆ.ನ.ಕೃ., ಟಿ.ಟಿ. ಶರ್ಮಾ, ಪಾಟೀಲ್ ಪುಟ್ಟಪ್ಪ, ಕಾರ್ನಾಡ, ಕಂಬಾರ, ಹುಯಿಲಗೋಳ ನಾರಾಯಣರಾವ್, ಸನದಿ, ಕಣವಿ, ರಾಜಕೀಯ ವಲಯದಿಂದ ನಿಜಲಿಂಗಪ್ಪ, ನೆಸ್ವಿ ದೇಶಪಾಂಡೆ ಮೊದಲಾದ ಧುರೀಣರು ಹೋರಾಟದಲ್ಲಿ ದುಮುಕಿದ್ದರು.

ಕನ್ನಡದ ಶ್ರೀಮಂತಿಕೆಯನ್ನು ಜಗಜ್ಜಾಹೀರು ಮಾಡುವ ಪ್ರಯತ್ನಗಳು



ಅವಿರತ ನಡೆಯುತ್ತಲೇ ಇದ್ದವು.

**ಅಖಂಡ ಕರ್ನಾಟಕ :** ನೃಪತುಂಗನೇ ಚಕ್ರವರ್ತಿ, ಪಂಪನೇ ಮುಖ್ಯಮಂತ್ರಿ... ಎಂದು ಕುವೆಂಪು ಘೋಷಿಸಿದರು.

ಕನ್ನಡ ಎನೆ ಕುಣಿದಾಡುವುದೆನ್ನದೆ
ಕನ್ನಡ ಎನೆ ಕಿವಿನಿಮಿರುವುದು
ಎಂದು ಕುವೆಂಪು ಭಾವಪರವಶರಾಗಿ ನುಡಿದರು.

**ಬೇಂದ್ರೆ ರಣಕಹಳೆ ಮೊಳಗಿಸಿದರು :**

ನುಗ್ಗಿರಣ್ಣ ರಣದ ಕಣಕೆ
ಅಸುರರಿಂದ ಬಿಡಿಸಿರಿ
ತಾಯಿ ಸೆರೆಯ ಎಲ್ಲರಿಂದ
ಗೆಲುವಿನ ನುಡಿ ಹಿಡಿಸಿರಿ
ಭೂದೇವಿ ನಲಿವಂತೆ
ವಿಜಯಗೀತ ನುಡಿಸಿರಿ

**ಜಿ.ಪಿ. ರಾಜರತ್ನಂ ಹೇಳಿದರು :**

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯಾನ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ ಪರವಾಡ್ತೀನಿ
ನನ್ ಮನಸ್ಸನ್ ನೀಕಾಣೆ
ದೀಕ್ಷೆಯ ತೋರು ಇಂದೇ
ಕಂಕಣ ಕಟ್ಟಿಂದೇ
ಕನ್ನಡ ನಾಡೊಂದೇ
ಇನ್ನೆಂದೂ ತಾನೊಂದೇ

ಎಂಬ ಕುವೆಂಪು ಮಾತು ಜನಮಾನಸದಲ್ಲಿ ಬೇರೂರಿತು.

ಸಾಹಿತಿ, ಕವಿ, ಬರಹಗಾರ, ಪತ್ರಕರ್ತ, ರಾಜಕಾರಿಣಿ, ಸಮಾಜಸೇವಕ ಈ ಎಲ್ಲರ ನಿರಂತರ ಹೋರಾಟದ ಫಲವಾಗಿ ಕನ್ನಡ ಮಾತನಾಡುವ ಜನರೆಲ್ಲರೂ ಒಂದೇ ಆಡಳಿತದಡಿ ಬಂದರು. ರಾಜ್ಯದ ಹೆಸರು ಕರ್ನಾಟಕವಾಯಿತು. ಕನ್ನಡ ಭಾಷೆ, ಆಡಳಿತ ಭಾಷೆಯಾಯಿತು. ಕನ್ನಡ ಭಾಷೆ ಸಾರ್ವಭೌಮತ್ವವನ್ನು ಪಡೆಯಿತು. ಮುಂದಿನ ದಿನಗಳಲ್ಲಿ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಹೆಸರುಗಳೂ ಆದವು.

ಆದರೂ ಇನ್ನೂ ಭಾಷೆಗೆ ಸಂಬಂಧಿಸಿದಂತೆ ಸಮಸ್ಯೆಗಳು, ವ್ಯಾಜ್ಯಗಳು, ತಕರಾರುಗಳು ನಿಂತಿಲ್ಲ.

ಮಹಾರಾಷ್ಟ್ರದೊಂದಿಗೆ ಗಡಿ ಸಮಸ್ಯೆ, ತಮಿಳುನಾಡಿನೊಂದಿಗೆ ಕಾವೇರಿ ಸಮಸ್ಯೆ, ಕೇರಳದೊಂದಿಗೆ ಹಳ್ಳಿಗಳ ಸೇರ್ಪಡೆ ಸಮಸ್ಯೆಗಳು ಇನ್ನೂ ಜೀವಂತವಾಗಿವೆ, ಜನಮನದಲ್ಲಿ ತುಡಿತವಿದೆ. ಪಕ್ಕದ ರಾಜ್ಯಗಳಿಂದ ಹಲವು ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕಿದೆ.

ಕನ್ನಡ ಭಾಷೆಗೆ ಸಹಸ್ರಾರು ವರ್ಷಗಳ ಭವ್ಯ ಇತಿಹಾಸವಿದೆ. ವಿಶ್ವ ಮನ್ನಣೆಯನ್ನು ಗಳಿಸುವ ಶ್ರೀಮಂತಿಕೆಯನ್ನು ಹೊಂದಿದೆ. 8 ಜ್ಞಾನಪೀಠ ಪ್ರಶಸ್ತಿಗೆ ಭಾಜನವಾಗಿದೆ.

ಕನ್ನಡ ಭಾಷೆ ಜನರ ಭಾಷೆಯಾಗಿ, ಆಡಳಿತ ಭಾಷೆಯಾಗಿ, ವಿಜೃಂಭಿತ ಭಾಷೆಯಾಗಿ ಮುನ್ನಡೆಯುತ್ತಿದೆ.

ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕ ಕಾವಲು ಸಮಿತಿಯನ್ನು ರಚಿಸಿದ್ದರು. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಕಾವಲು ಸಮಿತಿ ಅಧ್ಯಕ್ಷರಾಗಿದರು. ನಂತರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆಯಾಯಿತು. ಹಲವಾರು ಸಾಹಿತಿಗಳು




ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಭಾಷಾ ಬೆಳವಣಿಗೆಗೆ ಮಾರ್ಗದರ್ಶನ ಮಾಡಿದರು. ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ರಚನೆಯಾಯಿತು. ಕನ್ನಡ ನಾಡಿಗೆ ಸೇರಬೇಕಾದ ಗಡಿಪ್ರದೇಶಗಳನ್ನು ಪಡೆಯುವ, ಗಡಿ ಭಾಗದ ಪ್ರದೇಶಗಳ ಅಭಿವೃದ್ಧಿಗೆ ಮಾರ್ಗದರ್ಶನ ದೊರೆಯಿತು.

ಆದರೆ ಇಂತಹ ಪ್ರಾಧಿಕಾರಗಳ ರಚನೆ, ಪ್ರಯತ್ನ ಕರ್ನಾಟಕದಲ್ಲಿ ಮಾತ್ರವೇ ಆಗುತ್ತಿರುವುದು ವಿಷಾದನೀಯ ಎನ್ನದೆ ವಿಧಿಯಿಲ್ಲ. ಬೇರಾವ ಭಾಷೆಯಲ್ಲೂ ಇಂತಹ ಪ್ರಯತ್ನ ನಡೆದಿಲ್ಲವೆನ್ನಬಹುದು.

ಸ್ವಾಭಾವಿಕವಾಗಿ ಬೆಳೆದು ಶ್ರೀಮಂತವಾಗಬೇಕಿದ್ದ ಭಾಷೆಯನ್ನು ಬೆಳೆಸಲು ಪ್ರಾಧಿಕಾರಗಳ ರಚನೆ ಅಗತ್ಯವೇ ಅನಿಸದೆ ಇರದು.

ಏನೇ ಆಗಲಿ, 1956 ನವೆಂಬರ್ 1 ರಿಂದ ಕನ್ನಡನಾಡು, ಕರ್ನಾಟಕ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಭಾಷಾ ಬೆಸುಗೆ ಹಾಕುವಲ್ಲಿ ಭಾಷಾ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ, ಕನ್ನಡ ಭಾಷಿಕರು ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳುವಲ್ಲಿ ನೆರವು ನೀಡುತ್ತಿರುವುದು ವಿಶೇಷವಾಗಿದೆ.

ಪ್ರತಿವರ್ಷ ಸಾಹಿತ್ಯ ಸಮ್ಮೇಳನಗಳು ನಡೆಯುತ್ತಿವೆ. ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ, ಜನಜೀವನಕ್ಕೆ ಸಂಬಂಧಿಸಿದ ವಿಷಯಗಳ ಚಿಂತನ ಮಂಥನ ನಡೆಯುತ್ತಿದೆ. ಸಾಹಿತ್ಯ ಪ್ರಾಕಾರವೂ ಬೆಳೆಯುತ್ತಿದೆ. ಸಾಹಿತ್ಯವೂ ಸಮೃದ್ಧಿಯಾಗಿ ಹೊರಬರುತ್ತಿದೆ. ಕನ್ನಡ ನಾಡಿನ ಹೆಮ್ಮೆಯ ಕವಿ, ಸಾಹಿತಿ, ಬರಹಗಾರ, ಪತ್ರಕರ್ತ, ಸಮಾಜ ಸೇವಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

6 ದಶಕಗಳಿಗೂ ಹೆಚ್ಚು ಕಾಲದಿಂದ ಕನ್ನಡಿಗರದೇ ಆದ ಕನ್ನಡನಾಡು ವೈಭವದ ವಾತಾವರಣವನ್ನು ಸೃಷ್ಟಿಸಿದೆ. ಕನ್ನಡ ಕಲೆ, ಸಾಹಿತ್ಯ, ಸಂಸ್ಕೃತಿ ಮೇಳೈಸುತ್ತಿದೆ. ಇದರ ವೇಗ, ತೀವ್ರತೆ ಹೆಚ್ಚಲಿ. ಕನ್ನಡ ರಾಜ್ಯೋತ್ಸವದ ಶುಭಾಶಯಗಳು, ಶುಭಕಾಮನೆಗಳು.

14ನೇ ಪುಟಕ್ಕೆ...

# ಸಹಕಾರ ಕ್ಷೇತ್ರದಲ್ಲಿ ಸಹಕಾರ ರತ್ನ ಶ್ರೀ ಚಿತ್ತರಂಜನ್ ಬೋಳಾರ್‌ರವರಿಗೆ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ



**ಮಂಗಳೂರು :** ದಿನಾಂಕ ನವೆಂಬರ್ 1ರಂದು ನಗರದ ಕೇಂದ್ರ ಮೈದಾನದಲ್ಲಿ ನಡೆದ ದ.ಕ. ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ಸಾಧನೆಗಾಗಿ ಆತ್ಮಶಕ್ತಿ ವಿವಿದ್ಧೋದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅವರಿಗೆ 2023ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಯನ್ನು ದ.ಕ. ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡುರಾವ್‌ರವರು, ವಿಧಾನ ಪರಿಷತ್ ಸದಸ್ಯರಾದ ಹರೀಶ್ ಕುಮಾರ್, ಶಾಸಕರಾದ ಡಿ. ವೇದವ್ಯಾಸ ಕಾಮತ್, ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಮಂಗಳೂರು ಮಹಾನಗರ ಪಾಲಿಕೆ ವಿರೋದ ಪಕ್ಷದ ನಾಯಕರಾದ ಶ್ರೀ ಪ್ರವೀಣ್ ಚಂದ್ರ ಆಳ್ವರವರ ಉಪಸ್ಥಿತಿಯಲ್ಲಿ ನೀಡಿ ಗೌರವಿಸಲಾಯಿತು.

ಉದ್ಯಮಿ ಹಾಗೂ ಸಾಮಾಜಿಕ ಕಾರ್ಯಕರ್ತರು ಆಗಿರುವ ಶ್ರೀಯುತ ಚಿತ್ತರಂಜನ್ ಬೋಳಾರ್‌ರವರು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಮಂಗಳೂರು ಇದನ್ನು ಸ್ಥಾಪಿಸಿ, ಆಡಳಿತ ಮಂಡಳಿಯ ಸ್ಥಾಪಕಾಧ್ಯಕ್ಷರಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಘದ ಸಕ್ರಿಯ ಚಟುವಟಿಕೆಯೊಂದಿಗೆ ಅಧ್ಯಕ್ಷರ ಕ್ರಿಯಾಶೀಲತೆಯು ಉಲ್ಲೇಖನೀಯವಾದದ್ದು, ಅವರ ಕ್ರೀಯಶೀಲತೆಯಿಂದಾಗಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಕಳೆದ ಹತ್ತು ವರ್ಷಗಳಲ್ಲಿ 30 ಶಾಖೆಗಳನ್ನು ಹೊಂದಿದ್ದು ನೂರಕ್ಕೂ ಅಧಿಕ ಮಂದಿಗೆ ಉದ್ಯೋಗ ಕಲ್ಪಿಸಿ ರೂ .2000 ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿರುವುದು ಸಹಕಾರ ರಂಗದಲ್ಲಿ ಅಪರೂಪದ ಸಂಗತಿ.

ಮಹಿಳಾ ಸಬಲೀಕರಣದ ದೃಷ್ಟಿಯಿಂದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾಗಿ ಶ್ರೀಯುತರು ಮಾಡುತ್ತಿರುವ ಸೇವೆ ಅನನ್ಯ. ಸಂಘದಲ್ಲಿ ಶೇ.95% ಸಿಬ್ಬಂದಿಗಳು ಮಹಿಳೆಯರೆ ಇದ್ದು ಮಹಿಳೆಯರ ಮುಖಾಂತರ ಸಂಘದ ವ್ಯವಹಾರ ನಡೆಸುತ್ತಿರುವುದು ಅನುಕರಣೀಯ. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ ಮಂಗಳೂರು ಹಾಗೂ ದ.ಕ. ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ. ಜನತಾ ಬಜಾರ್ ಇದರ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆರೋಗ್ಯ ಪೂರ್ಣ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಸಂಘದ

...12ನೇ ಪುಟದಿಂದ

ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ರವರು ಸಹಕಾರಿ ಸಂಘದ ಮೂಲಕವಾಗಿ 55ಕ್ಕೂ ಮಿಕ್ಕಿ ಉಚಿತ ಆರೋಗ್ಯ ಶಿಬಿರಗಳನ್ನು ನಡೆಸಿ 400ಕ್ಕೂ ಮಿಕ್ಕಿ ಕಣ್ಣಿನ ಶಸ್ತ್ರಚಿಕಿತ್ಸೆ, 12,000ಕ್ಕೂ ಮಿಕ್ಕಿ ಉಚಿತ ಕನ್ನಡಕ ವಿತರಣೆ, ಉಚಿತ ಔಷದಿ ವಿತರಣೆ ಹಾಗೂ ಚಿಕಿತ್ಸೆ ಶಿಬಿರಗಳನ್ನು ಇದರ ಜೊತೆಗೆ ಒತ್ತಡ ನಿರ್ವಹಣೆ, ಆರೋಗ್ಯ ಸಂರಕ್ಷಣೆ ಹಾಗೂ ಕಾನ್ಸರ್ ಮುಂತಾದ ಮಾಹಿತಿ ಕಾರ್ಯಗಾರವನ್ನು ಏರ್ಪಡಿಸಿದ್ದಾರೆ.

ಸಾರ್ವಜನಿಕರ ಉಪಯೋಗಕ್ಕಾಗಿ ಬಸ್ಸು ತಂಗುದಾಣ ನಿರ್ಮಾಣ, ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅವರಿಗೆ ಉಚಿತವಾಗಿ **IAS/KAS** ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಭಾಗವಹಿಸಲು ಉಚಿತ ತರಭೇತಿಯನ್ನು ಆಯೋಜಿಸುತ್ತಾ ಬಂದಿರುವುದು, ಬಡ ಕುಟುಂಬಕ್ಕೆ ಮನೆ ಪುನರ್ ನಿರ್ಮಾಣ ಇಂತಹ ಹಲವು ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿರುತ್ತಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ (ನಿ.) ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ (ನಿ.) ಬೆಂಗಳೂರು ಮತ್ತು ಸಹಕಾರ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಸಹಕಾರ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ "ಸಹಕಾರ ರತ್ನ ಪ್ರಶಸ್ತಿ"ಯನ್ನು ನೀಡಿ ಗೌರವಿಸಲಾಗಿದೆ. ಸಹಕಾರ ಕ್ಷೇತ್ರದಲ್ಲಿನ ಸಾಧನೆಯನ್ನು ಗುರುತಿಸಿ ಐಕಾನ್ಸ್ ಆಫ್ ಇಂಡಿಯನ್ ಬಿಸಿನೆಸ್ ಸಂಸ್ಥೆಯಿಂದ "ಕರ್ನಾಟಕ ಗ್ಲೋರಿ ಅವಾರ್ಡ್–2023"ರ ಐಐಬಿ ಬೆಸ್ಟ್ ಲೀಡರ್‌ಶಿಪ್ ಅವಾರ್ಡ್ ನೀಡಿ ಗೌರವಿಸಲಾಗಿದೆ. "ಭಾರತ ರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ", "ಪರಿವರ್ತನಶ್ರೀ ರಾಜ್ಯ ಪ್ರಶಸ್ತಿ", ಸಮಾಜರತ್ನ ಪ್ರಶಸ್ತಿ, ಉತ್ತಮ ಸಹಕಾರಿ ಪ್ರಶಸ್ತಿ, ರಾಷ್ಟ್ರೀಯ ಬಸವಶ್ರೀ ಪ್ರಶಸ್ತಿ , "ಗುರು ಶ್ರೀ ಪ್ರಶಸ್ತಿ", ಶ್ರೀ ಕೃಷ್ಣಾನುಗೃಹ ರಾಜ್ಯ ಪ್ರಶಸ್ತಿ, ಸಜ್ಜನ ಚಂದನ ಸದ್ಭಾವನಾ ಪ್ರಶಸ್ತಿ, "ಪೊಸ ಕುರಲ್" ವಾಹಿನಿ ಸಾಧನಾ ಪ್ರಶಸ್ತಿ ಪುರಸ್ಕಾರ ಜೊತೆಯಲ್ಲಿ 100ಕ್ಕೂ ಮಿಕ್ಕಿ ಸಂಘ ಸಂಸ್ಥೆಗಳು ಶ್ರೀಯುತರನ್ನು ಗುರುತಿಸಿ ಸನ್ಮಾನಿಸಿ ಪ್ರಶಸ್ತಿ ನೀಡಿ ಗೌರವಿಸಿದೆ.

**ಅಭಿನಂದನೆಗಳು :** ಚಿತ್ತರಂಜನ್ ಬೋಳಾರ್ ಅವರ ಸಾಧನೆಗಳಿಗೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿ ಶುಭಕೋರಿ ಅಭಿನಂದನೆಗಳನ್ನಿ ಸಲ್ಲಿಸಿದೆ.

## ಬಿ.ಟಿ. ಜಯಲಕ್ಷ್ಮೀ ಲಕ್ಕೇಗೌಡ ನಿಧನ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ದಿವಂಗತ ಬಿ.ಎಲ್.ಲಕ್ಕೆಗೌಡರವರ ಧರ್ಮಪತ್ನಿ ಶ್ರೀಮತಿ ಬಿ.ಟಿ.ಜಯಲಕ್ಷ್ಮೀ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ನಿಧನರಾದರು.

ಬಿ.ಟಿ.ಜಯಲಕ್ಷ್ಮೀ ಅವರ ನಿಧನಕ್ಕೆ ರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿ ಸಂತಾಪ ವ್ಯಕ್ತಪಡಿಸಿದೆ.

## 67ನೇ ಕನ್ನಡ ರಾಜ್ಯೋತ್ಸವ : ಕನ್ನಡಿಗರ ಹಕ್ಕೊತ್ತಾಯ

- ವಿಧಾನಸೌಧ ಸಹಿತ ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಕನ್ನಡದಲ್ಲಿ ವ್ಯವಹಾರ ನಡೆಯಬೇಕು.
- ಬೆಂಗಳೂರು ಸಹಿತ ಕರ್ನಾಟಕದಲ್ಲಿ ವಾಸಿಸುವ ಪರಭಾಷಿಕರು ಕಡ್ಡಾಯವಾಗಿ ಕನ್ನಡದಲ್ಲಿ ಮಾತನಾಡುವುದನ್ನು ಕಲಿಯಬೇಕು ಹಾಗೂ ಅವರು ಕನ್ನಡದಲ್ಲಿಯೇ ವ್ಯವಹರಿಸಬೇಕು.
- ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೊದಲ ಆದ್ಯತೆ ನೀಡಬೇಕು ಆ ಹಿನ್ನೆಲೆಯಲ್ಲಿ ಡಾಕ್ಟರ್ ಸರೋಜಿನಿ ಮಹಿಷಿ ವರದಿ ಜಾರಿಗೆ ತರಬೇಕು
- ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕುಗಳಲ್ಲಿ ಕನ್ನಡದಲ್ಲಿ ವ್ಯವಹಾರ ನಡೆಯುವಂತೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು.
- ನ್ಯಾಯಾಲಯದ ಕಲಾಪಗಳು ಕನ್ನಡದಲ್ಲಿಯೇ ನಡೆಯಬೇಕು.
- ಕೇಂದ್ರ ಸರಕಾರದ ಕಚೇರಿಗಳಲ್ಲಿ ಕನ್ನಡದಲ್ಲಿ ವ್ಯವಹಾರ ನಡೆಯಬೇಕು.
- ಕರ್ನಾಟಕದಲ್ಲಿ ನಡೆಯುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಕನ್ನಡಮಯವಾಗಿರಬೇಕು.
- ರಾಜ್ಯದಲ್ಲಿ ಉದ್ಯಮ ಸ್ಥಾಪಿಸುವ ಕನ್ನಡಿಗರಿಗೆ ಸರ್ಕಾರ ವಿಶೇಷ ರಿಯಾಯಿತಿ ಕಲ್ಪಿಸಬೇಕು.
- ಪರಭಾಷೆ ಚಲನಚಿತ್ರಗಳ ಹಾವಳಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.
- ಕಾವೇರಿ ನದಿ ನೀರು ಸಹಿತ ರಾಜ್ಯದ ನದಿಗಳ ನೀರನ್ನು ಸಂಪೂರ್ಣ ಸದ್ಬಳಕೆ ಮಾಡಿಕೊಳ್ಳಲು ವಿಶೇಷ ಯೋಜನೆ ರೂಪಿಸಬೇಕು.
- ಬೆಳಗಾವಿ ಸಹಿತ ಗಡಿನಾಡ ಭಾಗದಲ್ಲಿರುವ ಕನ್ನಡಿಗರ ಹಾಗೂ ಕನ್ನಡ ಪ್ರದೇಶಗಳ ರಕ್ಷಣೆಗೆ ವಿಶೇಷ ಆದ್ಯತೆ ನೀಡಬೇಕು ಗಡಿಭಾಗದ ಕನ್ನಡಿಗರಿಗೆ ಉನ್ನತ ಶಿಕ್ಷಣ ಹಾಗೂ ಉದ್ಯೋಗದಲ್ಲಿ ವಿಶೇಷ ಮೀಸಲಾತಿ ಕಲ್ಪಿಸಬೇಕು.
- ಕನ್ನಡ ಭಾಷೆಯಲ್ಲಿ ಅಧ್ಯಯನ ಮಾಡಿದವರಿಗೆ ಸರ್ಕಾರಿ ನೌಕರಿಯಲ್ಲಿ ವಿಶೇಷ ಒಳ ಮೀಸಲಾತಿ ನೀಡಬೇಕು.
- ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಬೇಕು ಹಾಗೂ ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿ ಮಾಡಬೇಕು.

# ಬೆಳಕಿನ ಹಬ್ಬ ದೀಪಾವಳಿ ಬಾಳಿಗೆ ಕತ್ತಲಾಗದಿರಲಿ

ದೀಪದಿಂದ ದೀಪ ಹಚ್ಚುವ ಮೂಲಕ ಬೆಳಕಿನ ಹಬ್ಬ ದೀಪಾವಳಿಯನ್ನು ಸಂಭ್ರಮಿಸುವುದು ಹೆಚ್ಚು ಸೂಕ್ತ ಎನ್ನುವುದು ಹಲವು ವರ್ಷಗಳಿಂದ ಕೇಳಿ ಬರುತ್ತಲೇ ಇವೆ. ಆದರೆ, ಅದಕ್ಕೆ ಯಾರು ಹೆಚ್ಚು ಕಿವಿಗೊಡುತ್ತಿಲ್ಲ. ವಾಯು ಮತ್ತು ಶಬ್ದ ಮಾಲಿನ್ಯದ ಮೂಲಕ ಪರಿಸರವನ್ನು ಹಾಳುಮಾಡುವ, ಪ್ರಾಣಿ ಪಕ್ಷಿಗಳಿಗೆ ಹಾನಿ ಮಾಡುವ, ಹಿರಿಯರು ಮತ್ತು ಮಕ್ಕಳನ್ನು ಅಪಾಯಕ್ಕೆ ಸಿಲುಕಿಸುವಂತಹ ಅಪಾಯಕಾರಿ ಪಟಾಕಿ ಸಿಡಿಸುವ ಪರಿಪಾಠ ಮುಂದುವರೆಯುತ್ತಲೇ ಇದೆ. ಪ್ರತಿ ದೀಪಾವಳಿ ಸಂದರ್ಭದಲ್ಲಿಯೂ ಪಟಾಕಿ ಸಿಡಿಸುವ ವೇಳೆ ಬಹಳಷ್ಟು ಮಕ್ಕಳು ಕಣ್ಣಿಗೆ ಹಾನಿ ಮಾಡಿಕೊಳ್ಳುತ್ತಾರೆ. ಹಾಗಾಗಿ, ದೀಪಾವಳಿಯಲ್ಲಿ ಪಟಾಕಿ ಸಿಡಿಸುವ ವೇಳೆ ಅನುಸರಿಸಬೇಕಾದ ಮುನ್ನೆಚ್ಚರಿಕೆಗಳು, ಒಂದು ವೇಳೆ ಅಪಘಾತಗಳು ಸಂಭವಿಸಿದಾಗ ಪಾಲಿಸಬೇಕಾದ ಎಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಮಿಂಟೋ ಕಣ್ಣಾಸ್ಪತ್ರೆಯ ನಿರ್ದೇಶಕರಾದ ಡಾ. ಬಿ.ಎಲ್. ಸುಜಾತ ರಾಥೋಡ್ ಅವರೊಂದಿಗೆ ವಾರ್ತಾ ಜನಪದವು ಮಾತು-ಮಂಥನ ನಡೆಸಿದೆ.

**ದೀಪಾವಳಿಗೆ ಮಿಂಟೋ ಆಸ್ಪತ್ರೆಯ ತಯಾರಿ ಹೇಗಿದೆ?**

ಪ್ರತಿ ವರ್ಷ ದೀಪಾವಳಿಯಲ್ಲೂ ಮಿಂಟೋ ಆಸ್ಪತ್ರೆ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸುತ್ತದೆ. ಕಳೆದ 10 ವರ್ಷದಿಂದ ದೀಪಾವಳಿ ಆಚರಣೆಯಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂದು ಜಾಗೃತಿ ಮೂಡಿಸಲಾಗುತ್ತದೆ. ತುರ್ತು ಸಂದರ್ಭದಲ್ಲಿ ಕೆಲಸ ಮಾಡಲು ಆಸ್ಪತ್ರೆಯಲ್ಲಿ ದಿನದ 24 ಗಂಟೆಯಲ್ಲೂ ಸಿಬ್ಬಂದಿಗಳು, ವೈದ್ಯರು ಲಭ್ಯರಿರುತ್ತಾರೆ. ಎಲ್ಲಾ ಘಟಕಗಳು ಕೆಲಸ ನಿರ್ವಹಿಸುತ್ತವೆ. ರೋಗಿಗಳಿಗೆ ಉನ್ನತ ಗುಣಮಟ್ಟದ ಚಿಕಿತ್ಸೆ ನೀಡಲು ನಾವು ಸದಾ ಸಜ್ಜಾಗಿರುತ್ತೇವೆ. ದೀಪಾವಳಿಯ ಸಂದರ್ಭದಲ್ಲಂತೂ ರಜೆ ಪಡೆಯದೆ ಬದ್ಧತೆಯಿಂದ ಕೆಲಸ ಮಾಡುತ್ತೇವೆ.

**ದೀಪಾವಳಿಯಲ್ಲಿ ಪಟಾಕಿ ಅನಿವಾರ್ಯವೇ?**

ದೀಪಾವಳಿ ಆಚರಣೆಗೆ ಐತಿಹಾಸಿಕ, ಧಾರ್ಮಿಕ ನಂಬಿಕೆಗಳಿವೆ. ಈ ಹಿಂದೆ ಜನ ಕಾಡಿನಲ್ಲಿ ವಾಸಿಸುವಾಗ ಕತ್ತಲಿನಲ್ಲಿ ಬರುವ ಕೀಟಗಳನ್ನು ದೂರ ಸರಿಸಲು ದೀಪ ಹಚ್ಚುತ್ತಿದ್ದರು. ರಾಮಾಯಣದಲ್ಲಿ ಶ್ರೀರಾಮ ರಾವಣನ ಮೇಲೆ ಯುದ್ಧ ಜಯಿಸಿ ನಾಡಿಗೆ ಮರಳುವಾಗ ಅದ್ದೂರಿ ಸ್ವಾಗತಕ್ಕಾಗಿ, ವಿಜಯದ ಸಂಭ್ರಮಕ್ಕಾಗಿ ಮತ್ತು ದಾರಿಯಲ್ಲಿನ ಕತ್ತಲನ್ನು ತೊಲಗಿಸಲು ಉದ್ದಕ್ಕೂ ದೀಪ ಹಚ್ಚಲಾಗಿತ್ತು ಎಂದು ಓದಿದ್ದೇವೆ. ಈಗಿನ ಕಾಲಘಟ್ಟದಲ್ಲಿ ದೀಪ ಹಚ್ಚುವ ಬದಲು ಪಟಾಕಿ ಸಿಡಿಸುವ ಆಚರಣೆ ಬೇಕಾ ಎಂಬ ಪ್ರಶ್ನೆ ಕಾಡುತ್ತಲೇ ಇದೆ. ನಾವು ವೈದ್ಯರಾಗಿ ಹೇಳುವುದಾದರೆ ಪಟಾಕಿಗಳನ್ನು ಬಳಸಲೇಬಾರದು. ಅದರಲ್ಲಿ ರಾಸಾಯನಿಕಗಳು ಹೆಚ್ಚಿರುತ್ತವೆ. ಪಟಾಕಿ ಸಿಡಿತದಿಂದ ಸಣ್ಣ ಪುಟ್ಟ ಗಾಯಗಳ ಜೊತೆಗೆ ದೊಡ್ಡ ಮಟ್ಟದ ಗಾಯಗಳಾಗಬಹುದು. ಕೆಲವೊಮ್ಮೆ ಸಿಡಿಮದ್ದು ಸಿಡಿತದ ರಭಸಕ್ಕೆ ಕಣ್ಣುಗುಡ್ಡೆಯೇ ಹೊರಗೆ ಬಂದು ದೃಷ್ಟಿ ಕಳೆದುಕೊಂಡಿರುವ ಉದಾಹರಣೆಗಳು ಉಂಟು.



**ಯಾವ ಮಾದರಿಯ ಮುಂಜಾಗ್ರತೆ ಅಗತ್ಯ?**

ನೇತ್ರ ವೈದ್ಯರಾಗಿ ನಮ್ಮ ಉದ್ದೇಶವೇ ತಮ ಸೋಮಾ ಜೋತಿರ್ಗಮಯ, ಮೊದಲಿಗೆ ಪಟಾಕಿ ಬಳಸಬೇಡಿ ಎಂಬುದು ನಮ್ಮ ಸಲಹೆ, ಪಟಾಕಿ ಹಚ್ಚದೆ ಇದ್ದರೆ ಅನಾವುತಗಳೇ ಇರುವುದಿಲ್ಲ. ಆದರೂ ಪಟಾಕಿ ಹಚ್ಚಲೇಬೇಕು ಎಂದಾದರೆ ಅಗತ್ಯ ರಕ್ಷಣಾತ್ಮಕ ಕ್ರಮಗಳನ್ನು ಅನುಸರಿಸಬೇಕಿದೆ. ಮಕ್ಕಳು ಹಿರಿಯರ ಉಪಸ್ಥಿತಿಯಲ್ಲಿ ಪಟಾಕಿ ಹಚ್ಚಬೇಕು, ದೊಡ್ಡವರು ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಾ, ಮಕ್ಕಳ ಕೈಗೆ ಪಟಾಕಿಕೊಟ್ಟು ಕಳುಹಿಸಬಾರದು. ಅದರಲ್ಲೂ ಉತ್ತಮ ಗುಣಮಟ್ಟದ ಪಟಾಕಿಗಳನ್ನೇ ಬಳಕೆ ಮಾಡಬೇಕು, ಅದರಿಂದ ಅಪಾಯಗಳು ಕಡಿಮೆಯಾಗಬಹುದು. ತಯಾರಿಕಾ ಕಂಪನಿಗಳು ಸೂಚಿಸಿದ ಸುರಕ್ಷಿತ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ರಾಕೆಟ್ ನಂತಹ ಅಪಾಯಕಾರಿ ಸಿಡಿಮದ್ದುಗಳನ್ನು ಮನೆ ಮುಂದೆ ಹಚ್ಚಬಾರದು. ಹಾಗೆ ಮಾಡಿದರೆ ನೆರೆ ಮನೆಗೆ ಬಿದ್ದು ಸಮಸ್ಯೆ ಉಂಟು ಮಾಡಬಹುದು. ರಾಕೆಟ್‌ಗಳನ್ನು ಸರಿಯಾಗಿ ಮೇಲ್ಮುಖವಾಗಿಯೇ ಹಚ್ಚಬೇಕು, ಫ್ಲವರ್ ಪಾಟ್‌ಗಳನ್ನು ಅದಷ್ಟು ದೂರದಿಂದ ಅಂಟಿಸಬೇಕು, ಪಟಾಕಿ ಸಿಡಿಸಲು ಉದ್ದದ ಊದಬತ್ತಿ ಬಳಕೆ ಮಾಡಬೇಕು. ಕಂಪನಿಗಳು ತಿಳಿಸಿದ ಮಾದರಿಯಲ್ಲೇ ಮುನ್ನೆಚ್ಚರಿಕೆ ವಹಿಸಬೇಕು. ಮನೆ ಬಾಗಿಲಿನಲ್ಲಿ ಪಟಾಕಿ ಹಚ್ಚಬಾರದು. ಮನೆಯಲ್ಲಿರುವ ಹಿರಿಯರಿಗೆ ತೊಂದರೆಯಾಗುತ್ತದೆ. ವಿಶಾಲ ಹೊರ ಆವರಣದಲ್ಲಿ ಪಟಾಕಿ ಹಚ್ಚಬೇಕು. ಪಟಾಕಿಗಳಿಂದ ದೊಡ್ಡವರಿಗಿಂತ ಚಿಕ್ಕ ಮಕ್ಕಳಿಗೆ ಹೆಚ್ಚು ಅಪಾಯವಾಗುತ್ತಿದೆ. ಇನ್ನು ಟುಸ್ ಪಟಾಕಿಗಳನ್ನು ಗುಡ್ಡೆ ಹಾಕಿ ಬೆಂಕಿ ಹಚ್ಚಿದಾಗಲೂ ಅವು ಸಿಡಿದು ಗಾಯಗಳಾಗಿವೆ.

**ಪಟಾಕಿ ಸಮಸ್ಯೆಗೆ ಪರಿಹಾರವೇನು ?**

ವಿಶ್ವದ ಎಲ್ಲಾ ದೇಶಗಳಲ್ಲೂ ಸಂಭ್ರಮಾಚರಣೆಗೆ ಪಟಾಕಿ ಹಚ್ಚಬೇಕಾದರೆ ದೊಡ್ಡ ಮೈದಾನ ಗುರುತಿಸಿ ಅಲ್ಲಿ ಸಿಡಿಸುವ ಪದ್ಧತಿ ಜಾರಿಯಲ್ಲಿದೆ. ಬಯಲು ಮೈದಾನದಲ್ಲಿಯಾವುದೇ ಅಡಚಣೆಗಳು ಮತ್ತು ಸಮೀಪದಲ್ಲಿ ಜನ ಇರಬಾರದು ಎಂಬ ನಿಯಮ ಪಾಲನೆ ಮಾಡುತ್ತಾರೆ. ಅದೇ ರೀತಿ ಇಲ್ಲಿಯೂ ಮೈದಾನ ಗುರುತಿಸಬೇಕು. ಪಟಾಕಿ ಸಿಡಿಸಲು ಸೂಕ್ತ ಸಮಯ ನಿಗದಿ ಮಾಡಬೇಕು. ಆ ಜಾಗದಲ್ಲಿ ಎಲ್ಲರೂ ಸೇರಿ ಪಟಾಕಿ ಸಿಡಿಸಬೇಕು. ಪಟಾಕಿಗಳನ್ನು ಮೈದಾನಲ್ಲಿ ಮಾರಾಟ ಮಾಡುವುದಷ್ಟೆ ಅಲ್ಲ, ಅವುಗಳನ್ನು ಸಿಡಿಸಲು ಮೈದಾನವೇ ಸುರಕ್ಷಿತ. ಬಯಲಿನಲ್ಲಿ ಪಟಾಕಿ ಸಿಡಿಸಿದರೆ ಗಾಳಿ ಬೀಸಿ ಹೊಗೆ ಬೇಗ ಕರಗಲಿದ್ದು, ವಾಯು ಮಾಲಿನ್ಯತೆ ತಗ್ಗುವ ಜೊತೆಗೆ ಜನವಸತಿ ಪ್ರದೇಶಗಳಿಗೆ ಶಬ್ದ ಮಾಲಿನ್ಯವಾಗುವುದಿಲ್ಲ. ಹಾಗೂ ಇದರಿಂದ ಮನೆಗಳ ಸಮೀಪ

ಸಂಭವಿಸುವ ಅಪಾಯಗಳು ಕಡಿಮೆಯಾಗಲಿವೆ.

**ಪಟಾಕಿ ಸಿಡಿಸುವ ವೇಳೆ ಕಣ್ಣಿಗೆ ಹಾನಿಯಾದರೆ ಮೊದಲಿಗೆ ಏನು ಮಾಡಬೇಕು?**

ಪಟಾಕಿಯಿಂದ ಅಪಾಯವಾದಾಗ ಅತ್ಯಂತ ಎಚ್ಚರಿಕೆ ವಹಿಸಬೇಕು. ಕಣ್ಣಿನ ಭಾಗದಲ್ಲಾದ ಗಾಯವನ್ನು ಉಜ್ಜುವುದು ಅಥವಾ ನೀರು ಹಾಕುವುದನ್ನು ಮಾಡಬಾರದು. ಸ್ವಚ್ಛವಾದ ಹತ್ತಿಯ ಬಟ್ಟೆಯನ್ನು ಕಣ್ಣಿಗೆ ಅಡ್ಡವಾಗಿ ಹಿಡಿದು ಮರೆ ಮಾಡಬೇಕು. ಕಣ್ಣು ಉಜ್ಜುವುದರಿಂದ ಪಟಾಕಿಯಿಂದ ಸಿಡಿದ ರಾಸಾಯನಿಕದ ಅವಶೇಷಗಳು ಕಣ್ಣಿನ ಸೂಕ್ಷ್ಮ ಭಾಗಕ್ಕೆ ಧಕ್ಕೆಯುಂಟು ಮಾಡಿ, ಶಾಶ್ವತ ಅಂಧತ್ವ ಮಾಡುವ ಸಾಧ್ಯತೆಗಳಿರುತ್ತವೆ. ಅದಕ್ಕಾಗಿ ತಕ್ಷಣವೇ ಹತ್ತಿರದ ಕಣ್ಣಿನ ಆಸ್ಪತ್ರೆಯನ್ನು ಸಂಪರ್ಕಿಸುವುದು ಉತ್ತಮ. ವರ್ಷದಿಂದ ವರ್ಷಕ್ಕೂ ಪಟಾಕಿ ಅನಾಹುತಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಪ್ರತಿವರ್ಷ ಮಿಂಟೋ ಆಸ್ಪತ್ರೆಗೆ ಕನಿಷ್ಠ 45 ಮಕ್ಕಳು ಗಾಯಗೊಂಡು ಬರುತ್ತಾರೆ. ಅವರಲ್ಲಿ ನಾಲ್ಕನೆ ಒಂದು ಭಾಗದಷ್ಟು ಮಕ್ಕಳಿಗೆ ದೃಷ್ಟಿ ಸಂಪೂರ್ಣ ಹೋಗುತ್ತದೆ. ಮಿಂಟೋ ಹೊರತು ಪಡಿಸಿ ಇತರ ಆಸ್ಪತ್ರೆಗಳಲ್ಲೂ ಸಾಕಷ್ಟು ಪ್ರಕರಣಗಳು ದಾಖಲಾಗುತ್ತವೆ. ದೀಪಾವಳಿ ಮತ್ತು ತುಳಸಿ ಹಬ್ಬದಲ್ಲಿ ಈ ಸಮಸ್ಯೆ ಸಾಮಾನ್ಯವಾಗಿದೆ. ಪ್ರತಿವರ್ಷ ನಾಲ್ಕೈದು ಮಂದಿ ದೃಷ್ಟಿ ಕಳೆದುಕೊಂಡು ಬಾಳನ್ನು ಕತ್ತಲು ಮಾಡಿಕೊಳ್ಳುವುದನ್ನು ಕಾಣುತ್ತಿದ್ದೇವೆ. ಕೋವಿಡ್ ಸಂದರ್ಭದಲ್ಲಿ ದುರಂತಗಳ ಪ್ರಮಾಣ ಒಂದಿಷ್ಟು ತಗ್ಗಿತ್ತಾದರೂ ಪೂರ್ಣ ತಗ್ಗಿರಲಿಲ್ಲ.

**ಮಿಂಟೋ ಆಸ್ಪತ್ರೆಯಲ್ಲಿ ಏನೆಲ್ಲಾ ಸೌಲಭ್ಯಗಳಿವೆ?**

ಮಿಂಟೋ ಆಸ್ಪತ್ರೆ 125 ವರ್ಷ ಸೇವಾ ಪರಿಣಿತಿ ಪಡೆದಿದೆ. ಕೆಂಪು ಕಣ್ಣಿನ ಚಿಕಿತ್ಸೆಗಾಗಿ ಆರಂಭದಲ್ಲಿ ಶುರುವಾದ ಚಿಕ್ಕ ಆಸ್ಪತ್ರೆ ಇಂದು ಎಲ್ಲಾ ರೀತಿಯ ದುಬಾರಿ ಮತ್ತು ಅತ್ಯಾಧುನಿಕ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ಹೊಂದಿದೆ. ಆಧುನಿಕ ಸಲಕರಣಗಳಿವೆ. ಕಣ್ಣಿನ ಸಮಸ್ಯೆಗಳಿಗೆ ಅಗತ್ಯ ಎನಿಸುವ ಯಾವ ಚಿಕಿತ್ಸೆಯೂ ಇಲ್ಲಿ ಇಲ್ಲ ಎನ್ನುವಂತಿಲ್ಲ. ಆ ರೀತಿ ಆಸ್ಪತ್ರೆ ಸಸಜ್ಜಿತವಾಗಿದೆ. ಲೋ ವಿಷನ್ ಡಿವೈಸಸ್, ರಿಯಾಬಿಲೇಟೇಷನ್ ಸಿಸ್ಟಮ್ಸ್, ಹೈಯರ್ ಎಂಡ್ ಲಾಸಿಕ್ ಸರ್ಜರಿ ಸೇರಿ ಎಲ್ಲ ರೀತಿಯ ಸೌಲಭ್ಯಗಳು ಇಲ್ಲಿ ರಿಯಾಯಿತಿ ದರದಲ್ಲಿ ರೋಗಿಗಳಿಗೆ ದೊರೆಯುತ್ತವೆ. ದೀಪಾವಳಿ ಸಂದರ್ಭದಲ್ಲಿ ವೈದ್ಯರಿಂದ ಡಿ ಗ್ರೂಪ್ ವರೆಗೂ ಎಲ್ಲರೂ ರಜೆ ಪಡೆಯದೆ ಸೇವೆಗೆ ನಿಯೋಜನೆಗೊಂಡಿರುತ್ತಾರೆ. ರೆಟಿನಾ ಸ್ಕ್ಯಾನಿಂಗ್ ತಪಾಸಣಾ ಕೇಂದ್ರಗಳು ತೆರೆದಿರುತ್ತವೆ. ಶಸ್ತ್ರಚಿಕಿತ್ಸೆಗೆ ವೈದ್ಯರು, ದಾದಿಯರು ಸಜ್ಜಾಗಿರುತ್ತಾರೆ. ಮಿಂಟೋ ಕಣ್ಣಿನ ಆಸ್ಪತ್ರೆ ದೀಪಾವಳಿ ವಾರದಲ್ಲಿ ದಿನ ಪೂರ್ತಿ ಕೆಲಸ ಮಾಡುತ್ತದೆ.

**ಹಸಿರು ಪಟಾಕಿಗಳು ಸುರಕ್ಷಿತವೇ?**

ಪಟಾಕಿಯಿಂದಾಗಿ ಗಾಯಗೊಂಡವರಿಗೆ ನಮ್ಮ ಪರಿಣಿತಿಯಲ್ಲಿ ಚಿಕಿತ್ಸೆ ಕೊಡುವುದು ಒಂದು ಭಾಗವಾದರೆ, ಸಾಮಾಜಿಕ ಹೊಣೆಗಾರಿಕೆಯಿಂದ ಜಾಗೃತಿಗೆ ಆದ್ಯತೆ ನೀಡುವುದು ಮತ್ತೊಂದು ಕರ್ತವ್ಯವಾಗಿದೆ. ಪಟಾಕಿಯಿಂದ ತೊಂದರೆಯಾಗಬಾರದು ಎಂದು ಪ್ರತಿವರ್ಷವೂ ಸಾಧ್ಯವಾದ ಮಟ್ಟಿಗೆ ಜಾಗೃತಿ ಮೂಡಿಸುತ್ತಲೇ ಇದ್ದೇವೆ. ಆದರೂ ದುರಂತಗಳ ಪ್ರಮಾಣ ಕಡಿಮೆಯಾಗಿಲ್ಲ. ಈಗ ಲಭ್ಯ ಇರುವ ಹಸಿರು ಪಟಾಕಿಗಳು ಪೂರ್ಣವಾಗಿ ರಾಸಾಯನಿಕ ಮುಕ್ತವಲ್ಲ, ಬೆಳಕು ಬರಲು ರಾಸಾಯನಿಕ ಬಳಸಿಯೇ ಪಟಾಕಿ ತಯಾರಿಸಲಾಗುತ್ತದೆ. ಹಾಗಾಗಿ ಶೇ.100ರಷ್ಟು ಯಾವ ಪಟಾಕಿಯೂ ಸುರಕ್ಷಿತವಲ್ಲ. ಕೆಮಿಕಲ್ ರಿಯಾಕ್ಷನ್ ಆಗಿಯೇ ಬೆಳಕು ಬರಬೇಕು. ಅದರಿಂದ ಹೊಗೆ ಸೃಷ್ಟಿಯಾಗುವುದು ಸಾಮಾನ್ಯ. ಆದರೆ ಅಪಾಯಕಾರಿ ರಾಸಾಯನಿಕ ಸಾಮಾನ್ಯ ಪಟಾಕಿಗಳಿಂತ ಹಸಿರು ಪಟಾಕಿಗಳಲ್ಲಿ ಶೇ.50ರಷ್ಟು ಕಡಿಮೆ ಇರಲಿದೆ.

**ಪಟಾಕಿ ನಿಷೇಧದ ಕುರಿತು ನಿಮ್ಮ ಅಭಿಪ್ರಾಯವೇನು?**

ಸಾಮಾಜಿಕ ಜಾಗೃತಿ ಜೊತೆಗೆ ಪಟಾಕಿ ನಿಷೇಧಿಸುವ ಸಮರ್ಪಕ ಕಾನೂನು ಅಗತ್ಯವಿದೆ. ದೆಹಲಿಯಲ್ಲಿ ಈಗಾಗಲೇ ಪಟಾಕಿ ನಿಷೇಧಿಸಲಾಗಿದೆ. ದೀಪದಿಂದ ದೀಪ ನಂದನ ನಾಂದಿಯಾಗಬೇಕೆ ಹೊರತು, ಪಟಾಕಿ ಸಿಡಿಸಲು ಹೋಗಿ ಬಾಳು ಕತ್ತಲು ಮಾಡಿಕೊಳ್ಳಬಾರದು. ಚಿಕಿತ್ಸೆಗಿಂತ ಜಾಗೃತಿ ಉತ್ತಮ ಎಂಬ ಆಶಯದೊಂದಿಗೆ ಸಂಪೂರ್ಣವಾಗಿ ಪಟಾಕಿ ನಿಷೇಧಿಸಬೇಕು ಎಂಬ ಆಶಯ ನಮ್ಮದು. ಪಟಾಕಿಯಿಂದ ಯಾವ ಉಪಯೋಗವಂತೂ ಇಲ್ಲ. ಈ ನಿರ್ಧಾರ ಜಾರಿಯಾದರೆ ಅದೆಷ್ಟೋ ಮಕ್ಕಳ ಬಾಳಿನಲ್ಲಿ ಬೆಳಕು ಉಳಿಯಲಿದೆ. ಪಟಾಕಿಗಳಿಂದ ಮನುಷ್ಯರಿಗಷ್ಟೆ ಅಲ್ಲ, ಪ್ರಾಣಿ ಪಕ್ಷಿಗಳಿಗೂ ತೊಂದರೆಯಾಗುತ್ತದೆ. ನಾಯಿ, ಬೆಕ್ಕು ಸೇರಿದಂತೆ ಸಾಕು ಪ್ರಾಣಿಗಳು ಬೆದರುತ್ತವೆ. ಪಟಾಕಿ ಶಬ್ದಕ್ಕೆ ಪಕ್ಷಿಗಳು ಅದುರಿ ಹೋಗುತ್ತವೆ. ಶಬ್ದ ಮಾಲಿನ್ಯ ರಕ್ತದೊತ್ತಡದ ಮೇಲೆ ಪರಣಾಮ ಬೀರಲಿದೆ. ಹಾಸಿಗೆ ಹಿಡಿದ ಹಿರಿಯರಿಗೆ ಇದು ಗಂಭೀರ ಸಮಸ್ಯೆ ಉಂಟು ಮಾಡಬಹುದು. ವಾಯು ಮಾಲಿನ್ಯ ಅಸ್ತಮ ರೋಗಿಗಳಿಗೆ ಪ್ರಾಣ ಸಂಕಟ ತಂದಿಡಲಿದೆ. ತಂತ್ರಜ್ಞಾನ ಅಭಿವೃದ್ಧಿಯಾದಂತೆ ದೊಡ್ಡದೊಡ್ಡ ಪಟಾಕಿಗಳು, ಬಾಂಬ್‌ಗಳು ತಯಾರಾಗುತ್ತಿವೆಯೇ ಹೊರತು, ಅಪಾಯಕಾರಿಯಲ್ಲದ ಪಟಾಕಿಗಳು ತಯಾರಾಗುತ್ತಿಲ್ಲ.

**ಅಪಾಯಕಾರಿ ಎನಿಸಿದರೂ ಜನ ಎಚ್ಚೆತ್ತುಕೊಳ್ಳದಿರುವುದು ಏಕೆ?**

ಸಮಾಜದಲ್ಲಿ ಮತ್ತಷ್ಟು ಜಾಗೃತಿಯ ಅಗತ್ಯವಿದೆ. ಮಿಂಟೋ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿಗಳು ಸುತ್ತಮುತ್ತ ಶಾಲೆಗಳಿಗೆ ಭೇಟಿ ನೀಡಿ ಪಟಾಕಿ ಬಳಕೆ ಮಾಡದಂತೆ ಜಾಗೃತಿ ಮೂಡಿಸುತ್ತಾರೆ. ಪಟಾಕಿಯನ್ನು ತಯಾರಿಸಲು ಮಕ್ಕಳನ್ನು ಬಳಸುವ ವರದಿಗಳಿವೆ. ಹಾಗಾಗಿ ಪಟಾಕಿ ಖರೀದಿ ನಿಲ್ಲಿಸಿದರೆ, ಮಕ್ಕಳನ್ನು ಬಾಲ ಕಾರ್ಮಿಕ ಪದ್ಧತಿಯಿಂದ ಹೊರ ತರಬಹುದು. ಶಿಕ್ಷಣ ಇಲಾಖೆ ಪ್ರತ್ಯೇಕವಾದ ಪಠ್ಯವನ್ನು ಸಿದ್ಧಪಡಿಸಿ ಪ್ರತಿ ಶಾಲೆಯಲ್ಲೂ ಶಿಕ್ಷಕರ ಮೂಲಕ ಮಕ್ಕಳಲ್ಲಿ ಜಾಗೃತಿ ಮೂಡಿಸಿ, ಪಟಾಕಿ ಬೇಡ ಎಂಬ ವಾತಾವರಣ ಸೃಷ್ಟಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟವರು ಗಮನ ಹರಿಸಲಿದ್ದಾರೆ. ಪಟಾಕಿ ನಿಷೇಧದಂತಹ ಕಾನೂನಿನ ಬಲ ದೊರೆತರೆ ಮತ್ತಷ್ಟು ಅನುಕೂಲವಾಗಲಿದೆ.

ದೇಹದಲ್ಲಿ ಕಣ್ಣು ಅತ್ಯಂತ ಸೂಕ್ಷ್ಮ ಹಾಗೂ ಮಹತ್ವದ ಅಂಗ. ದೃಷ್ಟಿ ನಷ್ಟವಾದರೆ ಬದುಕು ಸುಲಭವಾಗಿರಲು ಸಾಧ್ಯವಿಲ್ಲ. ಅದಕ್ಕಾಗಿ ಮಿಂಟೋ ಆಸ್ಪತ್ರೆ ನೇತ್ರದಾನದ ಬಗ್ಗೆ ಹೆಚ್ಚು ಜಾಗೃತಿ ಮೂಡಿಸುತ್ತದೆ. ಕೋವಿಡ್ ಸಮಯದಲ್ಲಿ ನೇತ್ರದಾನ ಮಾಡಿದವರ ಕಣ್ಣುಗಳನ್ನು ಸಂಗ್ರಹ ಮಾಡಲು ಕಷ್ಟವಾಯಿತು. ಕೋವಿಡ್‌ನ ಮೊದಲ ಹಾಗೂ ಎರಡನೇ ಹಂತದಲ್ಲಿ ಕಣ್ಣಿನಿಂದಲೂ ಸೋಂಕು ಹರಡುವುದು ಸಾಬೀತಾಗಿತ್ತು. ಎರಡನೇ ಹಂತದಲ್ಲಿ ಚಿಕಿತ್ಸೆಗೆ ಒಳಗಾದ ರೋಗಿಗಳಿಗೆ ಮೂಕ್ರೋಮೈಸಿಸ್ ಸೋಂಕು ಕಾಣಿಸಿಕೊಂಡಿದ್ದರಿಂದ ಬ್ಲಾಕ್ ಫಂಗಸ್ ಕಣ್ಣಿನ ಭಾಗಕ್ಕೆ ಹರಡುತ್ತಿದ್ದಂತೆ ಮಿದುಳಿಗೆ ತಲುಪುವ ಮೊದಲು ಕಣ್ಣನ್ನೇ ಸಂಪೂರ್ಣ ತೆಗೆಯುವುದು ಅನಿವಾರ್ಯವಾಗಿತ್ತು. ಆದರೆ ಪಟಾಕಿ ಸ್ವಯಂಕೃತ ಅಪರಾಧ, ಪಟಾಕಿ ಇಲ್ಲದೆ ದೀಪಾವಳಿ ಆಚರಣೆ ಮಾಡುವ ಮೂಲಕ ಅಮೂಲ್ಯ ಕಣ್ಣುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದೇ ಕ್ಷೇಮ ಎಂಬುದು ವೈದ್ಯರ ಸಲಹೆ.

– ಮಂಜುನಾಥ ನಾಯ್ಕ್, ಪತ್ರಕರ್ತರು, ಬೆಂಗಳೂರು.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▶▶ ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

**ಕೋರಂ ಆಗದೇ ಇರಲು ನಿರ್ದೇಶಕರು ಅನರ್ಹತೆಗೊಳ ಗಾಗುವುದು ಅಥವಾ ರಾಜೀನಾಮೆ ಅಥವಾ ಮರಣ ಅಥವಾ ತೆಗೆದು ಹಾಕಲಾಗುವುದು ಮುಂತಾದ ಯಾವುದೇ ಕಾರಣ ಇರಬಹುದು. ವಿಶೇಷಾಧಿಕಾರಿಯ ಅವಧಿ 6 ತಿಂಗಳು ಮೀರುವಂತಿಲ್ಲ. ಈ ಅವಧಿಯನ್ನು ಅಗತ್ಯ ಬಿದ್ದಲ್ಲಿ ಇನ್ನೂ 6 ತಿಂಗಳು ವಿಸ್ತರಿಸಬಹುದು. ತನ್ನ ಅವಧಿ ಮುಗಿಯುವ ಮೊದಲೇ ಹೊಸ ಆಡಳಿತ ಮಂಡಳಿಯನ್ನು ವಿಶೇಷಾಧಿಕಾರಿಯು ಅಸ್ತಿಸ್ವಕ್ಕೆ ತರಬೇಕು. ಇದನ್ನು ಕಾಯಿದೆ, ನಿಯಮ ಮತ್ತು ಉಪನಿಯಮಗಳ ಪ್ರಕಾರ ಮಾಡಬೇಕು ರದ್ದುಪಡಿಸಿದ ಆಡಳಿತ ಮಂಡಳಿಯಲ್ಲಿನ ನಿರ್ದೇಶಕರನ್ನು ಒಂದು ವರ್ಷದ ಅವಧಿಗೆ ಅನರ್ಹಗೊಳಿಸಬಹುದು. ಸದರಿಯವರು ಮುಂದಿನ ಚುನಾವಣೆಗೆ ಸ್ಪರ್ಧಿಸಲು, ನೇಮಕವಾಗಲು ಹಾಗೂ ಮುಂದುವರೆಯಲು ಅರ್ಹರಾಗಿರುವುದಿಲ್ಲ.**

....ಹಿಂದಿನ ಸಂಚಿಕೆಯಿಂದ

ನಿಬಂಧಕರು ಆ ಸಹಕಾರ ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಅಥವಾ ಅಮಾನತ್ತಿನಲ್ಲಿ ಇಟ್ಟು ಅದರ ಜಾಗದಲ್ಲಿ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಬಹುದು. ಈ ಬಗ್ಗೆ ಮುಖ್ಯಾಂಶಗಳು ಏನೆಂದರೆ,

- ಇಂತಹ ಆಡಳಿತಾಧಿಕಾರಯ ಅವಧಿ 6 ತಿಂಗಳು ಮಾತ್ರ
- ಆಡಳಿತ ಮಂಡಳಿಯನ್ನು ರದ್ದುಗೊಳಿಸಿದ್ದಲ್ಲಿ ಈ 6 ತಿಂಗಳ ಅವಧಿ ಮುಗಿಯುವುದರ ಒಳಗೆ ಆಡಳಿತಾಧಿಕಾರಿಯು ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿಯನ್ನು ಅಸ್ತಿಸ್ವಕ್ಕೆ ತರಬೇಕು.
- ಆಡಳಿತ ಮಂಡಳಿಯನ್ನು ಅಮಾನತ್ತಿನಲ್ಲಿ ಇಟ್ಟಿದ್ದಲ್ಲಿ ನಿಬಂಧಕರು ಸಂಘದ ಆಡಳಿತ ಮಂಡಳಿಯನ್ನು ಪುನಃ ಸ್ಥಾಪಿಸಬೇಕು ಮತ್ತು ಆಡಳಿತ ಮಂಡಳಿಗೆ ಪುನಃ ಅಧಿಕಾರವನ್ನು ವಹಿಸಿಕೊಡಬೇಕು

ಸರ್ಕಾರದ ಷೇರು ಹಣ ಅಥವಾ ಸಾಲ ಅಥವಾ ಸಹಾಯ ಧನ ಅಥವಾ ಖಾತರಿ – ಈ ಯಾವುದು ಇಲ್ಲದಂತಹ ಸಂಘಗಳ ಆಡಳಿತ ಮಂಡಳಿಯನ್ನು ನಿಬಂಧಕರು ರದ್ದು ಮಾಡುವಂತಿಲ್ಲ ಅಥವಾ ಅಮಾನತ್ತಿನಲ್ಲಿ ಇಡುವಂತಿಲ್ಲ. ಆಡಳಿತ ಮಂಡಳಿಯನ್ನು ರದ್ದು ಮಾಡುವ ಬದಲಾಗಿ ನಿಬಂಧಕರು ಆಡಳಿತ ಮಂಡಳಿಯನ್ನು ಅಮಾನತ್ತಿನಲ್ಲಿ ಇಟ್ಟು ಆಡಳಿತಾಧಿಕಾರಿಯನ್ನು ನೇಮಕ ಮಾಡಬಹುದು; ಆದರೆ ಇಂತಹ ಸಂದರ್ಭಗಳಲ್ಲಿ ಆಡಳಿತಾಧಿಕಾರಿಯ ಅವಧಿ ಮುಗಿದ ನಂತರ ಹಳೆಯ ಆಡಳಿತ ಮಂಡಳಿಯು ಮತ್ತು ಅಧಿಕಾರ ವಹಿಸಿಕೊಳ್ಳುತ್ತದೆ.

ಆಡಳಿತ ಮಂಡಳಿಯನ್ನು ರದ್ದು ಮಾಡುವ ಅಥವಾ ಅಮಾನತ್ತಿನಲ್ಲಿ ಇಡುವ ಮೊದಲು ನಿಬಂಧಕರು ಆಡಳಿತ ಮಂಡಳಿಗೆ ಒಂದು ನೋಟಿಸ್‌ನ್ನು ನೀಡಿ, ಯಾವ ಕಾರಣಗಳಿಗಾಗಿ ರದ್ದು ಮಾಡಲಾಗುತ್ತದೆ. ಅಥವಾ ಅಮಾನತ್ತು ಮಾಡಲಾಗುತ್ತಿದೆ.ಎಂಬುದನ್ನು ನಮೂದಿಸಿ, ಆಡಳಿತ ಮಂಡಳಿ ಯನ್ನು ಏಕೆ ರದ್ದು ಮಾಡಬಾರದು ಅಥವಾ ಅಮಾನತ್ತಿನಲ್ಲಿ ಇಡಬಾರದು ಎಂಬುದಕ್ಕೆ ಕಾರಣ ಕೇಳಿ ನೋಟಿಸ್ ನೀಡಬೇಕು.

ಒಂದು ವೇಳೆ ಸಹಕಾರ ಸಂಘದಲ್ಲಿ ಆಡಳಿತ ಮಂಡಳಿಯ ಸಭೆಗಳನ್ನು ಕೋರಂ ಇಲ್ಲದ ಕಾರಣ ನಡೆಸಲು ಸಾಧ್ಯವಾಗದೆ ಸಂಘವು ಕಾಯಿದೆ ಅಥವಾ ನಿಯಮಗಳು ಅಥವಾ ಉಪನಿಯಮಗಳ ಪ್ರಕಾರ ಕೆಲಸ ಮಾಡುತ್ತಿಲ್ಲವೆಂದು ನಿಬಂಧಕರಿಗೆ ಮನದಟ್ಟಾಗಿದ್ದಲ್ಲಿ ನಿಬಂಧಕರು ಅಂತಹ ಸಂಘಕ್ಕೆ ಒಬ್ಬ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು.

ಕೋರಂ ಆಗದೇ ಇರಲು ನಿರ್ದೇಶಕರು ಅನರ್ಹತೆಗೊಳ ಗಾಗುವುದು ಅಥವಾ ರಾಜೀನಾಮೆ ಅಥವಾ ಮರಣ ಅಥವಾ ತೆಗೆದು ಹಾಕಲಾಗುವುದು ಮುಂತಾದ ಯಾವುದೇ ಕಾರಣ ಇರಬಹುದು.ವಿಶೇಷಾಧಿಕಾರಿಯ ಅವಧಿ 6 ತಿಂಗಳು ಮೀರುವಂತಿಲ್ಲ. ಈ ಅವಧಿಯನ್ನು ಅಗತ್ಯ ಬಿದ್ದಲ್ಲಿ ಇನ್ನೂ 6 ತಿಂಗಳು ವಿಸ್ತರಿಸಬಹುದು. ತನ್ನ ಅವಧಿ ಮುಗಿಯುವ ಮೊದಲೇ ಹೊಸ ಆಡಳಿತ ಮಂಡಳಿಯನ್ನು ವಿಶೇಷಾಧಿಕಾರಿಯು ಅಸ್ತಿಸ್ವಕ್ಕೆ ತರಬೇಕು. ಇದನ್ನು ಕಾಯಿದೆ, ನಿಯಮ ಮತ್ತು ಉಪನಿಯಮಗಳ ಪ್ರಕಾರ ಮಾಡಬೇಕು ರದ್ದುಪಡಿಸಿದ ಆಡಳಿತ ಮಂಡಳಿಯಲ್ಲಿನ ನಿರ್ದೇಶಕರನ್ನು ಒಂದು ವರ್ಷದ ಅವಧಿಗೆ ಅನರ್ಹ ಗೊಳಿಸಬಹುದು.ಸದರಿಯವರು ಮುಂದಿನ ಚುನಾವಣೆಗೆ ಸ್ಪರ್ಧಿಸಲು, ನೇಮಕವಾಗಲು ಹಾಗೂ ಮುಂದುವರೆಯಲು ಅರ್ಹರಾಗಿರುವುದಿಲ್ಲ.

ಆಡಳಿತಾಧಿಕಾರಿ ಅಥವಾ ವಿಶೇಷಾಧಿಕಾರಿಗೆ ಆಡಳಿತ ಮಂಡಳಿಯ ಎಲ್ಲ ಅಧಿಕಾರಗಳೂ ಇರುತ್ತವೆ. ಅವರು ನಿಬಂಧಕರ ಹತೋಟಿಯಲ್ಲಿ ತಮ್ಮ ಕಾರ್ಯನಿರ್ವಹಣೆ ಮಾಡಬೇಕು. ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚನೆ ನಡೆಸದೇ ಆಡಳಿತ ಮಂಡಳಿಯ ರದ್ದತಿ ಅಥವಾ ಅಮಾನತ್ತನ್ನು ಮಾಡುವಂತಿಲ್ಲ. ಇದಲ್ಲದೆ, ಒಂದು ಸಹಕಾರಿ ಬ್ಯಾಂಕಿನ ಆಡಳಿತ ಮಂಡಳಿಯನ್ನು ತೆಗೆದುಹಾಕಬೇಕೆಂದು ರಿಸರ್ವ್ ಬ್ಯಾಂಕ್ ಕೋರಿಕೆ ಕಳಿಸಿದ್ದಲ್ಲಿ, ನಿಬಂಧಕರು ಅಂತಹ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಮಾಡಲೇಬೇಕು; ಈ ರದ್ದತಿಯ ಅವಧಿ ಒಂದು ವರ್ಷದ ವರೆಗೆ ಇರಬಹುದು.

# ಪತ್ತಿನ ಸಹಕಾರ ಸಂಘಗಳ ಬೇಡಿಕೆ ಈಡೇರಿಕೆಗೆ ಡಿಸೆಂಬರ್ 2, 3 ರಂದು ದೆಹಲಿಯಲ್ಲಿ ರಾಷ್ಟ್ರೀಯ ಅಧಿವೇಶನ

ದೇಶದ ಪತ್ತಿನ ಸಹಕಾರ ಸಂಘಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಈಡೇರಿಸುವಂತೆ 2023ರ ಡಿಸೆಂಬರ್ 2 ಮತ್ತು 3ನೇ ತಾರೀಖುಗಳಂದು "ಕ್ರೆಡಿಟ್ ಸೊಸೈಟಿಗಳ ರಾಷ್ಟ್ರೀಯ ಅಧಿವೇಶನವನ್ನು" ಭಾರತೀಯ ಕೃಷಿ ಅನುಸಂಧಾನ ಸಂಸ್ಥಾನ ಮೇಳದ ಮೈದಾನ, ಪುಸಾ ರಸ್ತೆ, ನವದೆಹಲಿ ಇಲ್ಲಿ ಆಯೋಜಿಸಲಾಗಿದೆ.

ಈ ಅಧಿವೇಶನವನ್ನು ಸಹಕಾರ ಭಾರತಿಯ ನೇತೃತ್ವದಲ್ಲಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದು, ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ, ಉಪಾಧ್ಯಕ್ಷರು 9980807963, ಜಿ. ಮಲ್ಲಿಕಾರ್ಜುನಯ್ಯ ನಿರ್ದೇಶಕರು, ರಾಜ್ಯ ಸಂಯೋಜಕರು 9448174171, ಡಾ. ಸಂಜಯ ಪಂ. ಹೊಸಮಠ, ನಿರ್ದೇಶಕರು, ರಾಷ್ಟ್ರೀಯ ಸಂಯೋಜಕರು 9448430999 ಇವರುಗಳನ್ನು ಸಂಪರ್ಕಿಸಬಹುದಾಗಿದೆ.

**ಕ್ರೆಡಿಟ್ ಸೊಸೈಟಿಗಳ ಸಮಸ್ಯೆ ಹಾಗೂ ಬೇಡಿಕೆಗಳು ಈ ಕೆಳಕಂಡಂತಿದೆ**

1. ಎಲ್ಲಾ ಕ್ರೆಡಿಟ್ ಸೊಸೈಟಿಗಳಿಗೆ ಡಿಪಾಸಿಟ್ ಇನ್ಸ್ಯೂರೆನ್ಸ್‌ನ ಲಾಭ ಸಿಗುವಂತಾಗಲಿ.
2. ಆದಾಯ ತೆರಿಗೆ ಕಾಯಿದೆಯಲ್ಲಿ (Income Tax Act) ಕ್ರೆಡಿಟ್ ಸೊಸೈಟಿಯ ವ್ಯಾಖ್ಯಾನವನ್ನು ಒಳಗೂಡಿಸಿ ಷರತ್ತು (80 P (2); 269 SS ಹಾಗೂ 269 T ನಿಂದ ವಿನಾಯಿತಿಯಾಗಿ, ಯಾವುದೇ ಬೇಧಬಾವವಿಲ್ಲದೆ ಪ್ರಾಪ್ತವಾಗಬೇಕು.
3. 97 ಸಂವಿಧಾನ ಸಂಶೋಧನೆಯಲ್ಲಿ ಅಂಗೀಕೃತ ಬೆಲೆಯ ಮಾನ್ಯ ಮಾಡುತ್ತ ಎಲ್ಲಾ ರಾಜ್ಯ ಹಾಗೂ ಕೇಂದ್ರಗಳಲ್ಲಿ ಕ್ರೆಡಿಟ್ ಸೊಸೈಟಿಗಳ ನೊಂದಣಿಯ ದಾರಿ ಪ್ರಶಸ್ತವಾಗಬೇಕು.
4. ಕ್ರೆಡಿಟ್ ಸೊಸೈಟಿಗಳಿಗೆ ರಾಷ್ಟ್ರೀಯ ಪಾವತಿ ಗೇಟ್ ವೇ (Ntnl. Payment Gateway) ವ್ಯವಸ್ಥೆಯ ಸದಸ್ಯತ್ವ ಸಗಬೇಕು, ಇದರಿಂದ ಕ್ರೆಡಿಟ್ ಸೊಸೈಟಿಗಳಿಗೆ ಕ್ಯಾಶ್‌ಲೆಸ್/ ಡಿಜಿಟಲ್ ಮಾಧ್ಯಮದಲ್ಲಿ ವ್ಯವಹಾರ ಮಾಡುವಂತಹ ಸಾಧ್ಯತೆಯಾಗಬೇಕು.
5. ಕ್ರೆಡಿಟ್ ಸೊಸೈಟಿಗಳಿಗೂ ಸಹ CIBIL ನಂತಹ ವ್ಯವಸ್ಥೆಯ ಲಾಭ ಸಿಗುವಂತಾಗಬೇಕು.
6. ಕ್ರೆಡಿಟ್ ಸೊಸೈಟಿಗಳಿಗೆ ಪ್ರಭಾವಿ ಹಾಗೂ ಸಮರ್ಥ ಸಾಲ ವಸೂಲಿ ಮಾಡುವ ಸಲುವಾಗಿ ಖಂಖಈ ಿಖಃ ನ ಅವಕಾಶವನ್ನು ಕ್ರೆಡಿಟ್ ಸೊಸೈಟಿಗಳಿಗೆ ನೀಡಬೇಕು.
7. ಸರ್ಕಾರಿ ಭದ್ರತೆಗಳಲ್ಲಿ ಹೂಡಿಕೆ ಮಾಡಲು ಕ್ರೆಡಿಟ್ ಸೊಸೈಟಿಗಳಿಗೆ ಅನುಮತಿ ನೀಡಬೇಕು.
8. ಕೇಂದ್ರ ಸರ್ಕಾರದಿಂದ ಸ್ಥಾಪಿತವಾದ ಮುದ್ರಾ ಲೋನ್‌ನಂತಹ ಯೋಜನೆಗಳಲ್ಲಿ ಕ್ರೆಡಿಟ್ ಸೊಸೈಟಿಗಳಿಗೂ ಸಹ ಸಹಭಾಗಿತ್ವವನ್ನು ನೀಡಬೇಕು.
9. ಎಲ್ಲಾ ಪ್ರದೇಶಗಳಲ್ಲಿ ಹಾಗೂ ಕೇಂದ್ರದಲ್ಲಿ ಕ್ರೆಡಿಟ್ ಸೊಸೈಟಿಗಳಿಗೆ ಜಾಗರೂಕ ಲೆಕ್ಕಪರಿಶೋಧಕ ಮಾನದಂಡ (Prudential Accounting Norms) ಅನ್ನು ಜಾರಿಗೊಳಿಸಬೇಕು.
10. ಕ್ರೆಡಿಟ್ ಸೊಸೈಟಿಗಳಿಗೆ ಸ್ವ-ನಿಬಂಧನೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಮಾರ್ಗವನ್ನು ವಿಸ್ತರಿಸಬೇಕು.



## ಪತ್ತಿನ ಸಹಕಾರ ಮಹಾಮಂಡಳ ಮುಖ್ಯಕಾರ್ಯನಿರ್ವಹಣಾಧಿಕಾರಿ ನೇಮಕ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀ ಪ್ರಜ್ವಲ್ ಕೆ.ಎನ್. ಅವರು ನೇಮಕಗೊಂಡಿದ್ದು ಅಧಿಕಾರ ಸ್ವೀಕರಿಸಿದ್ದಾರೆ. ಪತ್ತಿನ ಮಹಾಮಂಡಳದ ಆಡಳಿತ ಮಂಡಳಿ ಸದಸ್ಯರುಗಳು ಶ್ರೀ ಪ್ರಜ್ವಲ್ ಕೆ.ಎನ್. ಅವರಿಗೆ ಶುಭ ಕೋರಿ ಅಭಿನಂದಿಸಿದ್ದಾರೆ.